## 2.2 'ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ' ಮೇಲಿನ ಸಾಧನಾ ಲೆಕ್ಕಪರಿಶೋಧನೆ

### ಕಾರ್ಯಕಾರೀ ಸಾರಾಂಶ

*ಪೀಠಿಕೆ*

ಕೃಷ್ಣಾ ಮೇಲ್ದಂಡೆ ಯೋಜನೆಯು 492.25 ಮೀಟರುಗಳ ಎತ್ತರದ ನಾರಾಯಣಪುರ ಅಣೆಕಟ್ಟು ಹಾಗೂ 524.25 ಮೀಟರುಗಳ ಎತ್ತರದ ಆಲಮಟ್ಟಿ ಅಣೆಕಟ್ಟು ನಿರ್ಮಾಣವನ್ನು ಹಾಗೂ ಉತ್ತರ ಕರ್ನಾಟಕದ ಬರಪೀಡಿತ ಜಿಲ್ಲೆಗಳಾದ ವಿಜಯಪುರ, ಬಾಗಲಕೋಟೆ, ಕಲಬುರ್ಗಿ ಹಾಗೂ ರಾಯಚೂರು ಜಿಲ್ಲೆಗಳ ಕೆಲವು ನೀರಾವರಿ ಭಾಗಗಳಿಗೆ ನಾಲೆಗಳ ಜಾಲ–ಸಂಪರ್ಕವನ್ನು ಒಳಗೊಂಡಿದೆ.

ನಾರಾಯಣಪುರ ಹಾಗೂ ಆಲಮಟ್ಟಿ ಅಣೆಕಟ್ಟುಗಳೆರಡರಿಂದಲೂ (ಜಲಾಶಯ ಮಟ್ಟದವರೆಗೆ 519.60 ಮೀಟರುಗಳು) ಹಿನ್ನೀರಿನ ಪ್ರಭಾವಕ್ಕೆ ಈಡಾಗಿದ್ದ 176 ಗ್ರಾಮಗಳ ಪೈಕಿ 173ರ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು 2001–02ರಲ್ಲಿ ಪೂರ್ಣಗೊಂಡಿದ್ದವು ಹಾಗೂ ಉಳಿಕೆ ಮೂರು ಗ್ರಾಮಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳು ಪ್ರಗತಿಯಲ್ಲಿದ್ದವು (ಸೆಪ್ಟಂಬರ್ 2015). ಬಾಗಲಕೋಟೆ ಪಟ್ಟಣದಲ್ಲಿರುವ ಜನತೆಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಜಲಾಶಯ ಮಟ್ಟದ 521 ಮೀಟರುಗಳವರೆಗೆ ಪೂರ್ಣಗೊಳಿಸಲಾಗಿತ್ತು ಹಾಗೂ ತದನಂತರದ ಮಟ್ಟಗಳಿಗೆ ಸಂಬಂಧಿಸಿದಂತೆ ಕಾಮಗಾರಿಯು ಪ್ರಗತಿಯಲ್ಲಿತ್ತು. ಅಲ್ಲದೇ, ನಾರಾಯಣಪುರ ಜಲಾಶಯದ ಪ್ರವಾಹಕ್ಕೆ ಈಡಾಗಿದ್ದ 14 ಗ್ರಾಮಗಳಿಗೆ ಸಂಬಂಧಿಸಿದಂತೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಪ್ರಗತಿಯಲ್ಲಿದ್ದವು.

ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವ ವಿಧಾನಗಳನ್ನು ಸರ್ಕಾರವು 1989–95ರಲ್ಲಿ ಕಾರ್ಯನಿರ್ವಾಹಕ ಆದೇಶಗಳ ಮೂಲಕ ನಿರ್ದಿಷ್ಟಪಡಿಸಿತ್ತು ಹಾಗೂ ಈ ಕಾರ್ಯನೀತಿಗಳು ಈಗಲೂ ಜಾರಿಯಲ್ಲಿವೆ (2015–16).

*ಕಾರ್ಯಗತಗೊಳಿಸುವ ಪ್ರಾಧಿಕಾರಗಳು*

ಸರ್ಕಾರದ ಸಂಪೂರ್ಣ ಒಡೆತನದ ಕಂಪನಿಯಾಗಿರುವ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತವು (ಕಂಪನಿ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿನ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳೂ ಸೇರಿದಂತೆ ನೀರಾವರಿ ಯೋಜನೆಗಳನ್ನು ಒಟ್ಟಾರೆಯಾಗಿ ಕಾರ್ಯಗತಗೊಳಿಸಲು ಜವಾಬ್ದಾರಿಯುತವಾಗಿತ್ತು. ಹಣಕಾಸನ್ನು ಸಾಲಗಳನ್ನು ಪಡೆಯುವುದರಿಂದ ಹಾಗೂ ರಾಜ್ಯ ಆಯವ್ಯಯದಿಂದ ಭರಿಸಲಾಗುತ್ತಿತ್ತು.

ಭೂ ಸ್ವಾಧೀನಗಳ ಆಯುಕ್ತರವರು ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಹಾಗೂ ಪದನಿಮಿತ್ತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಭೂಸ್ವಾಧೀನಕ್ಕೆ ಅಧಿಕಾರವನ್ನು ನೀಡಲಾಗಿತ್ತು. ಬಾಗಲಕೋಟೆ ಪಟ್ಟಣದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿಯೇ ಪ್ರತ್ಯೇಕವಾಗಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿತ್ತು.

*ಲೆಕ್ಕಪರಿಶೋಧನೆಯ ಉದ್ದೇಶ*

ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಸ್ಥಳಾಂತರಗೊಂಡ ಜನತೆಗಾಗಿ, ಉದ್ದೇಶಿತ ಪ್ರಯೋಜನಗಳನ್ನು ಅವರುಗಳು ಪಡೆದುಕೊಳ್ಳಲು ಅನುಕೂಲ ಕಲ್ಪಿಸುವ ರೀತಿಯಲ್ಲಿ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಪ್ಯಾಕೇಜುಗಳನ್ನು ತ್ವರಿತಗತಿಯಲ್ಲಿ ಯೋಜಿಸಲಾಯಿತೇ ಹಾಗೂ ಕಾರ್ಯಗತಗೊಳಿಸಲಾಯಿತೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

***ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು***

***ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿಯ ಅನುಪಸ್ಥಿತಿ***

ಸರ್ಕಾರವು, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಮೇಲೆ ವಿವಿಧ ಕಾರ್ಯನೀತಿಗಳನ್ನು ಚಿಂತಿಸಿದಂತೆ, ಕರ್ನಾಟಕ ಯೋಜನೆಗಳಿಂದ ಸ್ಥಳಾಂತರಗೊಂಡ ವ್ಯಕ್ತಿಗಳ ಪುನರ್ವಸತಿ ಅಧಿನಿಯಮ, 1987ನ್ನು ಅಧಿಸೂಚನೆ ಹೊರಡಿಸಿತು (ಆಗಸ್ಟ್ 1994). ಆದರೆ, ಸರ್ಕಾರವು ಅಧಿನಿಯಮವನ್ನು ಕಾರ್ಯರೂಪಕ್ಕೆ ತರಲಿಲ್ಲ. ಸರ್ಕಾರವು, ಅಕ್ಟೋಬರ್ 2007ರಲ್ಲಿ ಅಧಿಸೂಚನೆ ಹೊರಡಿಸಲ್ಪಟ್ಟ ರಾಷ್ಟ್ರೀಯ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಕಾರ್ಯನೀತಿ, 2007ನ್ನೂ ಸಹ ಅಳವಡಿಸಿಕೊಂಡಿರಲಿಲ್ಲ. ಆದರೆ, 1989–95ರಲ್ಲಿ ನೀಡಲಾಗಿದ್ದ ಆದೇಶಗಳನ್ನು, ಕಾರ್ಯನೀತಿಯನ್ನು ಅಧಿಸೂಚನೆ ಹೊರಡಿಸಿದನಂತರ ಕಾರ್ಯಗತಗೊಳಿಸಲಾದ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಗಳಿಗೂ ಅನ್ವಯಗೊಳಿಸುವುದನ್ನು ಮುಂದುವರೆಸಿಕೊಂಡು ಹೋಯಿತು.

ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರವು ಹೊರಡಿಸಿದ ಕಾರ್ಯಾದೇಶಗಳು (1989–95) ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿ 2007ರಲ್ಲಿ ಚಿಂತಿಸಿದ್ದಂತಹ ಯೋಜನೆಯಿಂದ ಸ್ಥಳಾಂತರಿತ ಕುಟುಂಬಗಳಿಗೆ ನೀರಾವರಿ ಪ್ರದೇಶದಲ್ಲಿ ಭೂಮಿ ಹಂಚಿಕೆಯ ಪ್ರಮುಖ ಅನುವನ್ನು ಸೇರಿಸಿರಲಿಲ್ಲ. ತಮ್ಮ ಕೃಷಿ ಭೂಮಿಯನ್ನು ಕಳೆದುಕೊಂಡ ಯೋಜನೆಯಿಂದ ಸ್ಥಳಾಂತರಿತ ಕುಟುಂಬಗಳು ನೀರಾವರಿ ಪ್ರದೇಶದಲ್ಲಿ ಭೂಮಿ ಹಂಚಿಕೆಯಿಂದ ವಂಚನೆಗೊಳಗಾಗಿದ್ದಲ್ಲದೆ, ಅಸಮರ್ಪಕ ಪರಿಹಾರ ಮೊತ್ತವನ್ನೂ ಸ್ವೀಕರಿಸಿದ್ದರು.

ಸರ್ಕಾರವು ರಾಷ್ಟ್ರೀಯ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಕಾರ್ಯನೀತಿಯನ್ನು ಉಲ್ಲಂಘಿಸಿ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಪ್ರಯೋಜನಗಳನ್ನು ಬಳಕೆದಾರರ ದರ ಸೂಚ್ಯಂಕಕ್ಕೆ ತಕ್ಕಂತೆ ಸರಿಹೊಂದಿಸಿರಲಿಲ್ಲ. ತತ್ಪರಿಣಾಮವಾಗಿ, 1989–95ರಲ್ಲಿ ನಿಗದಿಯಾಗಿದ್ದ ವಿವಿಧ ಹಣಕಾಸಿನ ಪ್ರಯೋಜನಗಳನ್ನು ಪರಿಷ್ಕರಣೆಗೆ ಒಳಪಡಿಸದೆಯೇ, ಈಗಲೂ ಪಾವತಿಸಲಾಗುತ್ತಿದೆ (2015–16).

***ಸಾಮಾಜಿಕ–ಆರ್ಥಿಕ ಸಮೀಕ್ಷೆ***

ಸರ್ಕಾರವು, ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ನಡೆಸುವ ಸಲುವಾಗಿ ಯಾವುದೇ ನಿರ್ದಿಷ್ಟ ಮಾನದಂಡವನ್ನೂ ಕಡ್ಡಾಯಗೊಳಿಸಿರಲಿಲ್ಲ. ಸಾಮಾಜಿಕ–ಆರ್ಥಿಕ ಸಮೀಕ್ಷಾ ವರದಿಗಳು ಯೋಜನೆಯಿಂದ ಸ್ಥಳಾಂತರಗೊಂಡವರ ವರಮಾನ, ಗ್ರಾಮೀಣ ಕುಶಲಕರ್ಮಿಗಳ ವಿವರಗಳು, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದ ಕುಟುಂಬಗಳ ಪ್ರವರ್ಗಗಳು, ನಿರ್ಗತಿಕರು, ಅನಾಥರು, ವಿಧವೆಯರ ವಿವರಗಳನ್ನು ಒಳಗೊಂಡಿರಲಿಲ್ಲ.

ಯೋಜನೆಯನ್ನು ಕಾರ್ಯಗತಗೊಳಿಸುವ ಪೂರ್ವಾವಧಿಯಲ್ಲಿ ಹಾಗೂ ಕಾರ್ಯಗತಗೊಳಿಸಿದನಂತರದಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬಗಳ ಜೀವನದ ಸ್ಥಿತಿಗತಿಯ ಬಗ್ಗೆ ಮೂಲ ಮಾಹಿತಿಯ ಅನುಪಸ್ಥಿತಿಯಲ್ಲಿ, ಯೋಜನೆಯಿಂದ ದುರ್ಬಲಗೊಂಡ ಕುಟುಂಬಗಳ ಆರ್ಥಿಕ ಸ್ಥಿತಿಗತಿಯಲ್ಲಿ ಉತ್ತಮಗೊಂಡಿರುವುದು ಅಥವಾ ಉತ್ತಮಗೊಂಡಿಲ್ಲದಿರುವುದರ ಬಗ್ಗೆ ನಿರ್ಧಾರಣೆ ಮಾಡಲು ಸಾಧ್ಯವಾಗುವುದಿಲ್ಲ ಅಲ್ಲದೇ ಸಮಾಜದ ಕೆಲವು ವಿಭಾಗಗಳಿಗೆ ಆದ್ಯತೆ ಅಥವಾ ವಿಶೇಷ ಗಮನವನ್ನು ಕೊಟ್ಟಿದ್ದರ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ, ಅದು ರಾಷ್ಟ್ರೀಯ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಕಾರ್ಯನೀತಿಯ ಅನುಸಾರವಾಗಿರಲಿಲ್ಲ.

***ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಪೂರ್ಣಗೊಳಿಸುವಲ್ಲಿ ವಿಪರೀತವಾದ ವಿಳಂಬ***

ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ 14 ಗ್ರಾಮಗಳು ಕೇಂದ್ರ ಜಲ ಆಯೋಗದ ಭೂಸ್ವಾಧೀನ ಪ್ರಮಾಣಕಗಳ ವ್ಯಾಪ್ತಿಯಲ್ಲಿ ಬರುತ್ತಿದ್ದವಾದರೂ, ಈ ಗ್ರಾಮಗಳು ಆಗಸ್ಟ್ 2005ರಲ್ಲಿ ಹೊರಬಿಡಲಾದ ಪ್ರವಾಹ ನೀರಿನಿಂದ ಮುಳುಗಡೆಯಾದಾಗ ಹಾಗೂ ತೊಂದರೆಗೆ ಈಡಾದ ಜನತೆಯ ಕೋರಿಕೆಗಳ ನಂತರ ಪುನರ್ವಸತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿತ್ತು. ಸರ್ಕಾರವು, ಈ ಗ್ರಾಮಗಳ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಗಾಗಿ ಆದೇಶಗಳನ್ನು ಜನವರಿ 2007/ಸೆಪ್ಟಂಬರ್ 2009ರಲ್ಲಿ ನೀಡಿತು.

***ಅಸಮರ್ಪಕವಾದ ಭೂಮಿ ಖರೀದಿ ಹಾಗೂ ಪ್ರಯೋಜನಗಳನ್ನು ವಿತರಿಸದಿದ್ದುದು***

ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ತೊಂದರೆಗೆ ಈಡಾದ 14 ಗ್ರಾಮಗಳಿಗೆ ಸಂಬಂಧಿಸಿದಂತೆ, ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿ ನಿರ್ಮಾಣಗಳಲ್ಲಿ (ಪಿಡಿಎಫ್‌ಗಳ ಮನೆ ಮತ್ತು ಕಟ್ಟಡಗಳು) ಹಾಗೂ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಪರೀತವಾದ ವಿಳಂಬವಾಯಿತು. ಪುನರ್ವಸತಿಯನ್ನು ನಿರೀಕ್ಷಿಸುತ್ತಾ, ಈ ಗ್ರಾಮಗಳಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡ 4,274 ಕುಟುಂಬಗಳಿದ್ದವು (ಡಿಸೆಂಬರ್ 2015).

ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿ ಭೂಮಿಯನ್ನು ಅಸಮರ್ಪಕವಾಗಿ ಸ್ವಾಧೀನಪಡಿಸಿಕೊಂಡಿದ್ದ ಪ್ರಕರಣಗಳಿದ್ದವು, ಇದು ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸುವಲ್ಲಿ ವಿಳಂಬಗಳು ಉಂಟಾಗುವಲ್ಲಿ ಪರಿಣಮಿಸಿತು. ಕಟ್ಟಡಗಳು ಹಾಗೂ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಕೇವಲ ಡಿಸೆಂಬರ್ 2014 ಹಾಗೂ ಡಿಸೆಂಬರ್ 2015ರ ನಡುವಿನಲ್ಲಿ ಪೂರ್ಣಗೊಳಿಸಲಾಯಿತು. 14 ಗ್ರಾಮಗಳ ಪೈಕಿ ಎರಡು ಗ್ರಾಮಗಳಿಗೆ ಭೂ ಸ್ವಾಧೀನವು ಪೂರ್ಣಗೊಂಡಿರಲಿಲ್ಲ (ಡಿಸೆಂಬರ್ 2015).

ಭೂಮಿ ಹಾಗೂ ವಸತಿ ನಿರ್ಮಾಣ ಅನುದಾನಗಳು, ವರಮಾನ ಉತ್ಪತ್ತಿ ಮಾಡುವ ಅನುದಾನಗಳು, ಇತ್ಯಾದಿ ಇತರೆ ಪ್ರಯೋಜನಗಳನ್ನು ಈ 14 ಗ್ರಾಮಗಳಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡ ಯಾವುದೇ ಕುಟುಂಬಕ್ಕೂ ವಿತರಣೆ ಮಾಡಿರಲಿಲ್ಲ (ಡಿಸೆಂಬರ್ 2015).

***ಕಾರ್ಯಗತಗೊಳಿಸುವಿಕೆಯು ನಿಕೃಷ್ಟಮಟ್ಟದಿಂದ ಕೂಡಿದ್ದುದು***

ಆಲಮಟ್ಟಿ ಅಣೆಕಟ್ಟಿನಿಂದ ಬಾಗಲಕೋಟೆ ಪಟ್ಟಣದಲ್ಲಿ (ಜಲಾಶಯ ಮಟ್ಟ 521 ಮೀಟರುಗಳು ಹಾಗೂ ಜಲಾಶಯ ಮಟ್ಟ 523 ಮೀಟರುಗಳ ನಡುವೆ ವಾಸಿಸುತ್ತಿದ್ದಂತಹ) ತೊಂದರೆಗೆ ಈಡಾದ ಜನತೆಯು ಮಾಡಿದ ಪ್ರತಿಭಟನೆ ಹಾಗೂ ನೀಡಿದ ದೂರುಗಳ ಆಧಾರದ ಮೇರೆಗೆ, ಅವರುಗಳು ಜಲಾಶಯದ ಹಿನ್ನೀರಿನ ಕಾರಣ ಗಂಭೀರವಾದ ಅನಾರೋಗ್ಯಕರ ಸ್ಥಿತಿಯಿಂದ ತೊಂದರೆಗಳಿಗೆ ಈಡಾಗಿದ್ದರಿಂದ, ಸರ್ಕಾರವು, ಅವರುಗಳ ಪುನರ್ವಸತಿಗಾಗಿ ಆದೇಶವನ್ನು ಹೊರಡಿಸಿತು (ನವಂಬರ್ 2002).

ಸರ್ಕಾರದಿಂದ ನವಂಬರ್ 2002ರಲ್ಲಿ ನಿರ್ದೇಶನಗಳನ್ನು ಸ್ವೀಕರಿಸಿದ್ದಾಗ್ಯೂ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು, ಈ ವಿಷಯವನ್ನು ಜೂನ್ 2010ರಲ್ಲಿಯಷ್ಟೇ ನಿರ್ದೇಶಕರುಗಳ ಮಂಡಳಿಯ ಮುಂದೆ ತಂದಿದ್ದಿತು ಹಾಗೂ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಈ ಕುಟುಂಬಗಳಿಗೆ ಇನ್ನೂ ಪುನರ್ವಸತಿಯನ್ನು ಕಲ್ಪಿಸಬೇಕಾಗಿದೆ (ಡಿಸೆಂಬರ್ 2015). ಒಳಚರಂಡಿ ವ್ಯವಸ್ಥೆ, ರಸ್ತೆಗಳ ನಿರ್ಮಾಣ ಹಾಗೂ ವಿದ್ಯುದೀಕರಣ ಕಾಮಗಾರಿಗಳನ್ನು 2013–14ರಲ್ಲಿಯಷ್ಟೇ ಕೈಗೆತ್ತಿಕೊಳ್ಳಲಾಗಿತ್ತು ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು 2014–15ರಲ್ಲಿ ಪ್ರಾರಂಭಿಸಲಾಯಿತು.

**ಪೀಠಿಕೆ**

**2.2.1.** ಕೃಷ್ಣಾ ಮೇಲ್ದಂಡೆ ಯೋಜನೆಯು 492.25 ಮೀಟರುಗಳ ಎತ್ತರದ ನಾರಾಯಣಪುರ ಅಣೆಕಟ್ಟು ಹಾಗೂ 524.25 ಮೀಟರುಗಳ ಎತ್ತರದ ಆಲಮಟ್ಟಿ ಅಣೆಕಟ್ಟು ನಿರ್ಮಾಣವನ್ನು ಹಾಗೂ ಉತ್ತರ ಕರ್ನಾಟಕದ ಬರಪೀಡಿತ ಜಿಲ್ಲೆಗಳಾದ ವಿಜಯಪುರ, ಬಾಗಲಕೋಟೆ, ಕಲಬುರ್ಗಿ ಹಾಗೂ ರಾಯಚೂರು ಜಿಲ್ಲೆಗಳ ಕೆಲವು ಭಾಗಗಳಿಗೆ ನೀರಾವರಿ ಒದಗಿಸಲು ನಾಲೆಗಳ–ಸಂಪರ್ಕವನ್ನು ಒಳಗೊಂಡಿದೆ. ಭಾಗಶಃವಾಗಿ ವಿಶ್ವ ಬ್ಯಾಂಕಿನಿಂದ ಹಣಕಾಸಿನ ನೆರವನ್ನು ಒದಗಿಸಲ್ಪಟ್ಟ ನಾರಾಯಣಪುರ ಹಾಗೂ ಆಲಮಟ್ಟಿ ಅಣೆಕಟ್ಟುಗಳು ತಮ್ಮ ಪ್ರಕ್ಷೇಪಿತ ಎತ್ತರಗಳಿಗೆ 1978–97ರಲ್ಲಿ ಪೂರ್ಣಗೊಳ್ಳಲ್ಪಟ್ಟಿದ್ದವು. ಆಲಮಟ್ಟಿ ಜಲಾಶಯದ ಜಲ ಸಂಗ್ರಹಣೆಯು 519.60 ಮೀಟರುಗಳ ಜಲಾಶಯ ಮಟ್ಟವನ್ನು (ಆರ್‌ಎಲ್) 2002–03ರಲ್ಲಿ ಸಮೀಪಿಸಿತು ಹಾಗೂ ಸರ್ವೋಚ್ಚ ನ್ಯಾಯಾಲಯವು ಏಪ್ರಿಲ್ 2000ದಲ್ಲಿ ನೀಡಿದ ನಿರ್ದೇಶನಗಳ ಮೇರೆಗೆ, ಅದರ ಎತ್ತರವನ್ನು ಜಲಾಶಯ ಮಟ್ಟಕ್ಕೆ ಸೀಮಿತಗೊಳಿಸಲಾಯಿತು. ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯು ತನ್ನ ಅಂತಿಮ ತೀರ್ಪಿನಲ್ಲಿ (ಡಿಸೆಂಬರ್ 2010) ಆಲಮಟ್ಟಿ ಜಲಾಶಯದಲ್ಲಿ 524.25 ಮೀಟರುಗಳ ಸಂಪೂರ್ಣ ಜಲಾಶಯ ಮಟ್ಟಕ್ಕೆ (ಎಫ್‌ಆರ್‌ಎಲ್) ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ರಾಜ್ಯಕ್ಕೆ ಅನುಮತಿ ನೀಡಿತು. ಜಲಾಶಯ ಮಟ್ಟ 519.60 ಮೀಟರುಗಳು ಹಾಗೂ 524.25 ಮೀಟರುಗಳ ನಡುವಿನ ಆಲಮಟ್ಟಿ ಹಿನ್ನೀರಿನಿಂದ ತೊಂದರೆಗೆ ಒಳಗಾಗಿರುವ ಜನತೆಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ (R&R)[66] ಕಾರ್ಯವು ಬಾಕಿಯಿದ್ದು ಜಲಾಶಯದ ನೀರಿನ ಮಟ್ಟವನ್ನು 524.25 ಸಂಪೂರ್ಣ ಜಲಾಶಯ ಮಟ್ಟಕ್ಕೆ ಏರಿಸಿಲ್ಲ.

***ಯೋಜನೆಯನ್ನು ಕಾರ್ಯಗತಗೊಳಿಸುವ ಪ್ರಾಧಿಕಾರಗಳು***

**2.2.2.** ಸರ್ಕಾರದ ಸಂಪೂರ್ಣ ಒಡೆತನದ ಕಂಪನಿಯಾಗಿರುವ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತವು (ಕಂಪನಿ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಬರುವ ಎಲ್ಲಾ ನೀರಾವರಿ ಯೋಜನೆಗಳ ಪೂರ್ವಭಾವಿ ಯೋಜನೆಗಳನ್ನು ತಯಾರಿಸುವುದು, ಪರಿವೀಕ್ಷಣೆಗಳನ್ನು ಕೈಗೊಳ್ಳುವುದು, ಅಂದಾಜುಗಳನ್ನು ತಯಾರಿಸುವುದು, ಕಾರ್ಯಗತಗೊಳಿಸುವುದು, ಕಾರ್ಯಚರಣೆ ಹಾಗೂ ನಿರ್ವಹಣೆ ಮಾಡುವುದಕ್ಕೆ ಜವಾಬ್ದಾರಿಯುತವಾಗಿತ್ತು. ಅಲ್ಲದೇ, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಸಂಕಷ್ಟಕ್ಕೆ ಈಡಾದ ಜನತೆಗೆ ಕಂಪನಿಯು ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಮಾಡಿಕೊಡುವಲ್ಲಿಯೂ ಜವಾಬ್ದಾರಿಯುತವಾಗಿತ್ತು. ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಿಗಾಗಿ ನಿಧಿಯನ್ನು ಸಾಲ ಪಡೆಯುವುದರ ಮೂಲಕ ಹಾಗೂ ರಾಜ್ಯ ಆಯವ್ಯಯದಿಂದ ಭರಿಸಲಾಗುತ್ತಿತ್ತು.

ಕರ್ನಾಟಕ ಸರ್ಕಾರವು 'ಆಯುಕ್ತರು, ಭೂ ಸ್ವಾಧೀನ ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಹಾಗೂ ಪದನಿಮಿತ್ತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ' ಹುದ್ದೆಯನ್ನು ಸೃಷ್ಟಿಸಿತು (ಅಕ್ಟೋಬರ್ 1995) ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಭೂ ಸ್ವಾಧೀನಕ್ಕೆ ಅವರಿಗೆ ಅಧಿಕಾರವನ್ನು ನೀಡಲಾಗಿತ್ತು. ಕರ್ನಾಟಕ ಸರ್ಕಾರವು ಬಾಗಲಕೋಟೆ ಪಟ್ಟಣದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿಯೇ ಪ್ರತ್ಯೇಕವಾಗಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿತು (ಏಪ್ರಿಲ್ 1985).

[66] ಪುನರ್ವಸತಿಯು ಯಾವುದೇ ಒಂದು ವಸ್ತುವನ್ನು ಅದರ ಮೂಲ/ಪೂರ್ವಸ್ಥಿತಿಗೆ ತರುವ ಒಂದು ಕ್ರಿಯೆಯಾಗಿದೆ. ಪುನರ್ವ್ಯವಸ್ಥೆಯು ಜನತೆಯನ್ನು ವಾಸಿಸುವುದಕ್ಕಾಗಿ ಒಂದು ವಿಭಿನ್ನ ಸ್ಥಳಕ್ಕೆ ಸಾಗಣೆ ಮಾಡುವ ಕ್ರಿಯೆಯಾಗಿದೆ.

***ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಸ್ಥಿತಿಗತಿ***

**2.2.3**. ಸ್ಥಳಾಂತರಗೊಂಡ ವ್ಯಕ್ತಿ[67] ಹಾಗೂ ಸ್ಥಳಾಂತರಗೊಂಡ ಕುಟುಂಬ[68], ಈ ಪದಗಳನ್ನು ಯೋಜನೆಯಿಂದ ಸ್ಥಳಾಂತರಗೊಂಡ ವ್ಯಕ್ತಿ (ಪಿಡಿಪಿ)/ ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬ(ಪಿಡಿಎಫ್) ಇವುಗಳಿಗೆ ಉಲ್ಲೇಖಿಸಲಾಗುವುದು.

ನಾರಾಯಣಪುರ ಜಲಾಶಯದ ಹಾಗೂ ಆಲಮಟ್ಟಿ ಜಲಾಶಯದ (ಜಲಾಶಯ ಮಟ್ಟ 519.60 ಮೀಟರುಗಳವರೆಗೆ) ಹಿನ್ನೀರಿನಿಂದ ತೊಂದರೆಗೆ ಈಡಾಗಿದ್ದ 176 ಗ್ರಾಮಗಳ ಪೈಕಿ (70,176 ಪಿಡಿಎಫ್‌ಗಳ ಪೈಕಿ 68,512) 173 ಗ್ರಾಮಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಚಟುವಟಿಕೆಗಳು 2001–02ರಲ್ಲಿ ಪೂರ್ಣಗೊಂಡವು. ಉಳಿದ ಮೂರು ಗ್ರಾಮಗಳ (1,664 ಪಿಡಿಎಫ್‌ಗಳು) ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಪ್ರಗತಿಯಲ್ಲಿದ್ದವು (ಡಿಸೆಂಬರ್ 2015).

ಅಲ್ಲದೇ, 176 ಗ್ರಾಮಗಳ ಜೊತೆಯಲ್ಲಿಯೇ ಕೈಗೆತ್ತಿಕೊಳ್ಳಬೇಕಿದ್ದ 14 ಗ್ರಾಮಗಳ (4,274 ಪಿಡಿಎಫ್) ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಜನವರಿ 2007 ಹಾಗೂ ಸೆಪ್ಟೆಂಬರ್ 2009ರಲ್ಲಿಯಷ್ಟೇ ಪ್ರಾರಂಭಿಸಲಾಗಿತ್ತು ಹಾಗೂ ಅದು ಪ್ರಗತಿಯಲ್ಲಿತ್ತು (ಡಿಸೆಂಬರ್ 2015).

ಅಲ್ಲದೇ, ಬಾಗಲಕೋಟೆ ಪಟ್ಟಣವು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ತೊಂದರೆಗೆ ಈಡಾದ ಪ್ರಮುಖ ಪಟ್ಟಣವಾಗಿತ್ತು. ಜಲಾಶಯ ಮಟ್ಟ 521[69] ಮೀಟರುಗಳವರೆಗೆ ಬಾಗಲಕೋಟೆಯಲ್ಲಿ ವಾಸಿಸುತ್ತಿದ್ದ 4,524 ಪಿಡಿಫ್‌ಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು 2000–01ರಲ್ಲಿ ಪೂರ್ಣಗೊಳಿಸಲಾಗಿತ್ತು. ಮುಂದುವರೆದು, ಬಾಗಲಕೋಟೆ ಪಟ್ಟಣದಲ್ಲಿ ಜಲಾಶಯ ಮಟ್ಟ 521 ಮೀಟರುಗಳು ಹಾಗೂ ಜಲಾಶಯ ಮಟ್ಟ 523ರ ನಡುವೆ ತೊಂದರೆಗೆ ಈಡಾಗಿದ್ದ ಹಾಗೂ ಯೋಜನೆಯಿಂದ ಸ್ಥಳಾಂತರಗೊಂಡ 6,329 ಪಿಡಿಫ್‌ಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಗಳು ಪ್ರಗತಿಯಲ್ಲಿದ್ದವು (ಡಿಸೆಂಬರ್ 2015).

**ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿ, 2007**

**2.2.4** ಪ್ರಸ್ತುತ ಇದ್ದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಮೇಲೆ ರಾಷ್ಟ್ರೀಯ ಕಾರ್ಯನೀತಿ 2003ರನ್ನು ಬದಲಿಸಿ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿ 2007ನ್ನು ಅಕ್ಟೋಬರ್ 2007ರಿಂದ ಜಾರಿಗೊಳಿಸಲಾಯಿತು. ಹೊಸ ಕಾರ್ಯನೀತಿಯು ಸ್ವಯಂಪ್ರೇರಿತವಲ್ಲದ ಸ್ಥಳಾಂತರದ ಎಲ್ಲಾ ಯೋಜನೆಗಳಿಗೂ ಹೊಸ ಕಾರ್ಯನೀತಿಯನ್ನು ಅನ್ವಯಿಸಲಾಯಿತು. ತೊಂದರೆಗೊಳಗಾದ ಕುಟುಂಬಗಳ ಆರ್ಥಿಕ, ಪರಿಸರ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಮೇಲಿನ ವ್ಯತಿರಿಕ್ತ ಪರಿಣಾಮಗಳನ್ನು ಭಾಗವಹಿಸುವಿಕೆ ಮತ್ತು ಪಾರದರ್ಶಕವಾಗಿ ನಿಗದಿ ಮಾಡಬೇಕು. ಎಲ್ಲಿ ಹೆಚ್ಚಿನ ಸಂಖ್ಯೆಯ ಕುಟುಂಬಗಳು ತೊಂದರೆಗೊಳಗಾಗಿವೆಯೋ ಅಲ್ಲಿ ಸಾಮಾಜಿಕ ಪರಿಣಾಮಗಳ ಅಧ್ಯಯನ ನಡೆಸುವುದು, ಪುನರ್ವಸತಿ ಪ್ರದೇಶದಲ್ಲಿ ಅವಶ್ಯಕ ಮೂಲಭೂತ ಸೌಕರ್ಯಗಳು ಮತ್ತು ಸವಲತ್ತುಗಳನ್ನು ಒದಗಿಸುವುದು ಮತ್ತು ಪುನರ್ವಸತಿ ಪ್ಯಾಕೇಜ್‌ಗಳನ್ನು ಕಾರ್ಯಗತಗೊಳಿಸುವಿಕೆಯು

[67] ಸ್ಥಳಾಂತರಗೊಂಡ ವ್ಯಕ್ತಿ ಎಂದರೆ ಯೋಜನೆಗಾಗಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಭೂ ಸ್ವಾಧೀನ ಅಧಿನಿಯಮ, 1894ರ ಪರಿಚ್ಛೇದ 4ರ ಅಡಿಯಲ್ಲಿ ಯಾವುದೇ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕಕ್ಕೆ ಕಡೆಯ ಪಕ್ಷ ಒಂದು ವರ್ಷ ಭೂಮಿಯ ಒಡೆಯನಾಗಿದ್ದು ಅಥವಾ ಭೂಮಿಯ ಒಡೆಯನಾಗಿರದೆಯೇ, ಯೋಜನಾ ಪ್ರದೇಶದಲ್ಲಿ ವಾಸಿಸುತ್ತಿದ್ದು ಅಥವಾ ಭೂಮಿಯಲ್ಲಿ ಉಳುತ್ತಿದ್ದು ಅಥವಾ ಯಾವುದೇ ವ್ಯಾಪಾರಗಳನ್ನು ಮಾಡುತ್ತಿದ್ದು, ಗಳಿಕೆಗಾಗಿ ಕೆಲಸ ಮಾಡುತ್ತಿದ್ದು, ಆತನನ್ನು ಅಥವಾ ಆಕೆಯನ್ನು ಅಂತಹ ಭೂ ಸ್ವಾಧೀನದ ಕಾರಣ ಅವರ ಇಚ್ಛೆ ಇಲ್ಲದೆಯೇ/ಬಲವಂತವಾಗಿ ಅವರ ವಾಸಿಸುವ ಸ್ಥಳದಿಂದ ಸ್ಥಳಾಂತರಿಸಲ್ಪಟ್ಟ ವ್ಯಕ್ತಿ.

[68] ಸ್ಥಳಾಂತರಿಸಲಾದ ಕುಟುಂಬ ಎಂದರೆ ಸ್ಥಳಾಂತರಿಸಲಾದ ಪ್ರತಿಯೋರ್ವ ವಯಸ್ಕ ವ್ಯಕ್ತಿ, ಆತನ/ಆಕೆಯ ಮಡದಿ/ಪತಿ, ಅಪ್ರಾಪ್ತ ಮಕ್ಕಳು ಹಾಗೂ ಒಂದು ಮನೆಯಲ್ಲಿ ಪದ್ಧತಿಯಂತೆ ಭೂ ಸ್ವಾಧೀನ ಅಧಿನಿಯಮ, 1894ರ ಪರಿಚ್ಛೇದ 4ರ ಅಡಿಯಲ್ಲಿ ಯೋಜನೆಗಾಗಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕಕ್ಕೆ ಅಥವಾ ಅಂತಹ ಕುಟುಂಬವನ್ನು ಸ್ಥಳಾಂತರಿಸುವುದಕ್ಕೆ ಮುಂಚಿತವಾಗಿ ಕಡೆಯ ಪಕ್ಷ ಒಂದು ವರ್ಷದವರೆಗೆ ವಾಸಿಸುತ್ತಿರುವ ಇತರೆ ಅವಲಂಬಿಗಳು ಒಳಗೊಂಡಿರುತ್ತಾರೆ.

[69] ಬಾಗಲಕೋಟೆ ಪಟ್ಟಣದಲ್ಲಿ ಪುನರ್ವಸತಿಯನ್ನು ಆಲಮಟ್ಟಿ ಅಣೆಕಟ್ಟೆಯ ಜಲಾಶಯ ಮಟ್ಟ 519.60 ಮೀಟರುಗಳ ಸಂಗ್ರಹಣಾ ಮಟ್ಟಕ್ಕೆ ಜಲಾಶಯ ಮಟ್ಟ 521 ಮೀಟರುಗಳವರೆಗೆ ಮಾಡಲಾಗಿತ್ತು.

ಪೂರ್ಣಗೊಳ್ಳುವ ಸಮಯವನ್ನು ಸೂಚಿಸುವ ನಿರ್ದಿಷ್ಟ ಕಾಲಮಿತಿಯು ಕಡ್ಡಾಯ ಎಂಬುದಾಗಿ ಕಾರ್ಯನೀತಿ ನಿಗದಿಪಡಿಸಿತ್ತು. ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಕೂಡಾ ಕಾರ್ಯನೀತಿಯು ಕಡ್ಡಾಯಗೊಳಿಸಿದೆ.

ಕರ್ನಾಟಕ ಸರ್ಕಾರವು 2007ರ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿಯ ಅನುವುಗಳನ್ನು ಅಳವಡಿಸಿಕೊಳ್ಳಲಿಲ್ಲ. ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಕಾರ್ಯಗತಗೊಳಿಸುವ ಕಾರ್ಯವಿಧಾನಗಳು ಈ ಯೋಜನೆಯ ಅಡಿಯಲ್ಲಿ ತೊಂದರೆಗೊಳಗಾದ ಕುಟುಂಬಗಳಿಗೆ ಒದಗಿಸುವ ಸೌಲಭ್ಯಗಳ ವಿಧಾನಗಳನ್ನು ಸೂಚಿಸುವ 1989–95ರ ಅವಧಿಯಲ್ಲಿ ನೀಡಿದ ಕಾರ್ಯಕಾರೀ ಆದೇಶಗಳು ಈಗಲೂ ಚಾಲ್ತಿಯಲ್ಲಿವೆ (2015–16).

**ನಾವು ಈ ವಿಷಯವನ್ನು ಏಕೆ ಆಯ್ದುಕೊಂಡೆವು**

**2.2.5** ನಾರಾಯಣಪುರ ಮತ್ತು ಆಲಮಟ್ಟಿ ಅಣೆಕಟ್ಟುಗಳ ನಿರ್ಮಾಣದ (1978–97ರಲ್ಲಿ ಸಮಾಪ್ತವಾದ) ಜೊತೆಗೇ ಪ್ರಾರಂಭವಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಬರುವ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಚಟುವಟಿಕೆಗಳು ಈವರೆಗೂ ಮುಂದುವರೆದಿದೆ (ಡಿಸೆಂಬರ್ 2015). ಕೆಲವು ಹಳ್ಳಿಗಳನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ವ್ಯಾಪ್ತಿಯಿಂದ ಹೊರಗಿಟ್ಟಿದ್ದು, ತಕರಾರುಗಳಿಂದಾಗಿ ನೀರಿನ ಸಂಗ್ರಹಣಾ ಮಟ್ಟಗಳ ನಿರ್ಬಂಧ ಮತ್ತು ವಿವಿಧ ಹಂತಗಳಲ್ಲಿ ಕಳಪೆಮಟ್ಟದಲ್ಲಿ ಕಾರ್ಯಗತಗೊಳಿಸಿದ್ದುದರಿಂದಾಗಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಚಟುವಟಿಕೆಗಳು ಚಿರಂತನವಾಗಿ ವಿಳಂಬಗೊಂಡವು. ಯೋಜನೆಗೆ ಭಾಗಶಃ ನಿಧಿ ಒದಗಿಸಿದ್ದ ವಿಶ್ವ ಬ್ಯಾಂಕ್ ಕೂಡ, ಕರ್ನಾಟಕ ಸರ್ಕಾರವು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಸರಳವಾಗಿ ತೆಗೆದುಕೊಂಡಿದ್ದರಿಂದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯಗತಗೊಳಿಸುವಿಕೆಯ ಬಗ್ಗೆ ಟೀಕಿಸಿದೆ.

ಪುನರ್ವಸತಿ ಕೇಂದ್ರಗಳು ಮೂಲಭೂತ ಮೂಲಸೌಕರ್ಯಗಳಿಲ್ಲದೇ ಕಟ್ಟಲ್ಪಟ್ಟಿದ್ದರಿಂದ ಮತ್ತು ಪುನರ್ವ್ಯವಸ್ಥೆ ಕೇಂದ್ರಗಳು ಸ್ಥಾಪಿತವಾಗಿದ್ದರೂ ಈ ದಿನದ ತನಕ 173 ಗ್ರಾಮಗಳ ಪೈಕಿ 47 ಗ್ರಾಮಗಳ ಪಿ.ಡಿ.ಎಫ್‌ಗಳು ತಮ್ಮ ಸ್ವಗ್ರಾಮಗಳಲ್ಲೇ ವಾಸಿಸುವುದನ್ನು ಮುಂದುವರಿಸಿದ್ದರಿಂದ, ನಾರಾಯಣಪುರ ಅಣೆಕಟ್ಟು ಮತ್ತು ಆಲಮಟ್ಟಿ ಅಣೆಕಟ್ಟುಗಳಡಿಯಲ್ಲಿ ಪರಿಣಾಮಕ್ಕೊಳಗಾದ 173 ಗ್ರಾಮಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ನ್ಯೂನ್ಯತೆಗಳಿಂದ ಕೂಡಿತ್ತು. ಮುಂದುವರೆದು, 32 ಪುನರ್ವಸತಿ ಕೇಂದ್ರಗಳಲ್ಲಿ 146.6 ಎಕರೆಗಳು ಅತಿಕ್ರಮಣಕ್ಕೊಳಗಾಗಿದ್ದವು ಮತ್ತು ಪಿ.ಡಿ.ಎಫ್‌ಗಳಿಗಾಗಿ ಹಂಚಿಕೆಗಾಗಿಯೆಂದೇ ಇದ್ದ ₹ 53.41 ಕೋಟಿ ಅನುದಾನವು ಹಂಚಲ್ಪಡದೇ ಉಳಿದಿತ್ತು.

ಇದನ್ನು ಗಮನದಲ್ಲಿರಿಸಿಕೊಂಡು ಲೆಕ್ಕಪರಿಶೋಧನೆಯು 2010–15ರ ಅವಧಿಯಲ್ಲಿ ಕೈಗೆತ್ತಿಕೊಂಡ ಆಲಮಟ್ಟಿ ಅಣೆಕಟ್ಟಿನಡಿಯಲ್ಲಿನ ಮೂರು ಹಳ್ಳಿಗಳ, ನಾರಾಯಣಪುರ ಅಣೆಕಟ್ಟಿನಡಿಯಲ್ಲಿ 14 ಹಳ್ಳಿಗಳ, ಅಲ್ಲದೆ ಬಾಗಲಕೋಟೆ ಪಟ್ಟಣದ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಚಟುವಟಿಕೆಗಳ ಅಧ್ಯಯನವನ್ನು, ಹಿಂದಿನ ಅನುಭವಗಳಿಂದೇನಾದರೂ ಪಾಠಕಲಿಯಲಾಗಿದೆಯೋ ಎಂದು ಖಚಿತಪಡಿಸಿಕೊಳ್ಳಲು ಕೈಗೊಳ್ಳಲಾಯಿತು.

**ಲೆಕ್ಕಪರಿಶೋಧನೆಯ ಉದ್ದೇಶ**

**2.2.6** ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕೃಷ್ಣಾ ಮೇಲ್ದಂಡೆ ಯೋಜನೆಯ ಜನತೆಗಾಗಿ ನಿರ್ಧಾರಿತವಾಗಿದ್ದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಪ್ಯಾಕೇಜುಗಳನ್ನು ಉದ್ದೇಶಿತ ಪ್ರಯೋಜನಗಳನ್ನು ಅವರು ಪಡೆದುಕೊಳ್ಳಲು ಅನುಕೂಲ ಕಲ್ಪಿಸುವುದಕ್ಕಾಗಿ ಒಂದು ತ್ವರಿತ ರೀತಿಯಲ್ಲಿ ಕಾರ್ಯಗತಗೊಳಿಸಲಾಯಿತೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶವಾಗಿತ್ತು.

### ಲೆಕ್ಕಪರಿಶೋಧನೆಯ ವ್ಯಾಪ್ತಿ

**2.2.7.** ಈ ಕೆಳಗಿನವುಗಳನ್ನು ಸಮೀಕ್ಷಿಸುವುದು ಲೆಕ್ಕಪರಿಶೋಧನೆಯ ವ್ಯಾಪ್ತಿಯಲ್ಲಿತ್ತು:

- 2010–15ರಲ್ಲಿ ಪ್ರಗತಿಯಲ್ಲಿದ್ದ ಮೂರು ಗ್ರಾಮಗಳ[70] (1,664 ಪಿಡಿಫ್‌ಗಳು) ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಮೂರು ಪುನರ್ವಸತಿ ಕೇಂದ್ರಗಳ[71] ಸ್ಥಾಪನೆ.
- ನಾರಾಯಣಪುರ ಜಲಾಶಯದಿಂದ ಬಿಡುಗಡೆಯಾದ ಪ್ರವಾಹ ನೀರಿನಿಂದ ತೊಂದರೆಗೆ ಈಡಾದ 14 ಗ್ರಾಮಗಳ[72] (ಯೋಜನೆಯಿಂದ ಸ್ಥಳಾಂತರಗೊಂಡ 4,274 ಪಿಡಿಎಫ್‌ಗಳು) ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು; ಹಾಗೂ
- ಜಲಾಶಯ ಮಟ್ಟ 521 ಮೀಟರುಗಳು ಮತ್ತು ಜಲಾಶಯ ಮಟ್ಟ 523 ಮೀಟರುಗಳ ನಡುವೆ ತೊಂದರೆಗೆ ಈಡಾದ (6,329 ಪಿಡಿಎಫ್‌ಗಳು) ಬಾಗಲಕೋಟೆ ಪಟ್ಟಣದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಹಾಗೂ ಆಲಮಟ್ಟಿ ಅಣೆಕಟ್ಟಿನ ಜಲಾಶಯ ಮಟ್ಟ 523 ಮೀಟರುಗಳಿಂದ 525 ಮೀಟರುಗಳವರೆಗೆ ಮಾಡಲಾದ ಭೂ ಸ್ವಾಧೀನ.

### ಲೆಕ್ಕಪರಿಶೋಧನೆಯ ವಿಧಿ ವಿಧಾನ

**2.2.8** ಲೆಕ್ಕಪರಿಶೋಧನೆಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಅಳವಡಿಸಿಕೊಳ್ಳಲಾದ ವಿಧಾನವು, ಲೆಕ್ಕಪರಿಶೋಧನೆಯ ಉದ್ದೇಶಗಳನ್ನು ಉನ್ನತ ಮಟ್ಟದ ವ್ಯವಸ್ಥಾಪನೆಗೆ ವಿವರಿಸುವುದು, ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ ಇಲಾಖೆ, ಕಂಪನಿಯ ಪ್ರಧಾನ ಕಚೇರಿ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರ ಕಚೇರಿ, ಮುಖ್ಯ ಇಂಜಿನಿಯರ್‌ರವರ ಕಚೇರಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಇವುಗಳಲ್ಲಿ ನಿರ್ವಹಿಸಿದ್ದಂತಹ ದಾಖಲೆಗಳ ಪರಿಶೀಲನೆಯನ್ನು ಒಳಗೊಂಡಿತ್ತು.

ಲೆಕ್ಕಪರಿಶೋಧನೆಯು, ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳನ್ನು ಸರ್ಕಾರಕ್ಕೆ, ಕಂಪನಿಯ ವ್ಯವಸ್ಥಾಪನೆಗೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರಿಗೆ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಇಂಜಿನಿಯರ್‌ರವರಿಗೆ ಮಾರ್ಚ್ 2015ರಲ್ಲಿ ನಡೆಸಲಾದ **'**ಪ್ರವೇಶ ಸಭೆ**'**ಯಲ್ಲಿ ವಿವರಿಸಿತು. ಕರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ ಅಕ್ಟೋಬರ್ 2015ರಲ್ಲಿ ನೀಡಲಾಯಿತು. ನಿರ್ಗಮನ ಸಭೆಯನ್ನು ಡಿಸೆಂಬರ್ 2015ರಲ್ಲಿ ನಡೆಸಲಾಯಿತು, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಂದ ಪ್ರತಿನಿಧಿಸಲ್ಪಟ್ಟಿದ್ದ ಸರ್ಕಾರದ ಜೊತೆ, ಜಲ ಸಂಪನ್ಮೂಲ ಇಲಾಖೆ, ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರು ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಇಂಜಿನಿಯರ್‌ರವರ ಜೊತೆ ಆ ಸಭೆಯಲ್ಲಿ ಚರ್ಚಿಸಲಾಯಿತು. ಸರ್ಕಾರದ ಅಭಿಪ್ರಾಯಗಳನ್ನು ವರದಿಯಲ್ಲಿ ಸೇರಿಸಲಾಗಿದೆ.

### ಲೆಕ್ಕಪರಿಶೋಧನೆಯ ಮಾನದಂಡಗಳು

**2.2.9** ಲೆಕ್ಕಪರಿಶೋಧನೆಯ ಉದ್ದೇಶಗಳು ಈಡೇರಿರುವುದನ್ನು ನಿರ್ಧಾರಣೆ ಮಾಡುವುದಕ್ಕಾಗಿ ಅಗತ್ಯವೆನಿಸಿದ ಮಾನದಂಡಗಳನ್ನು ಈ ಕೆಳಗಿನ ಮೂಲಗಳಿಂದ ಪಡೆದುಕೊಳ್ಳಲಾಯಿತು:

- ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ನೀಡಿರುವ ಕಾರ್ಯನಿರ್ವಾಹಕ ಆದೇಶಗಳು, ಕೇಂದ್ರ ಜಲ ಆಯೋಗದ ಪ್ರಮಾಣಕಗಳು, ಭೂ ಸ್ವಾಧೀನ ಅಧಿನಿಯಮ, 1894, ನ್ಯಾಯಸಮ್ಮತ ಪರಿಹಾರಕ್ಕಾಗಿನ ಹಕ್ಕು

---

[70] ಕಮಲದಿನ್ನಿ, ಧಣ್ಣೂರು, ಕನಕನವಾಡಿ.

[71] ಪುನರ್ವಸತಿ ಕೇಂದ್ರವು ತೊಂದರೆಗೆ ಈಡಾದ ಕುಟುಂಬಗಳಿಗೆ ಒದಗಿಸಲಾಗುವ ಬದಲಿ ವಸತಿ ವ್ಯವಸ್ಥೆ.

[72] ಕಟಗೂರು, ತುರಡ್ಗಿ, ಬೊಮ್ಮನಗಿ, ಕೆಂಗಲ್ಕಡಪಟ್ಟಿ, ಬಿಸ್ನಾಲ್, ಬಿಸ್ನಾಲ್‌ಕೊಪ್ಪ, ಇದ್ದಲ್ಗಿ, ಕಮದತ್ತ, ಅಡಿಯಾಲ, ಯೆಮ್ಮೆಟಿ, ಅನುಪ್‌ಕಟ್ಟಿ, ಕೇಸರ್‌ಪೆಂಟಿ, ಕಜ್ಗಲ್, ವರಗೊದ್ದಿನ್ನಿ.

ಹಾಗೂ ಭೂ ಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಅಧಿನಿಯಮ, 2013, ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿ, 2007, ಸರ್ಕಾರಿ ಆದೇಶಗಳು, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1993;

- ಸಾಮಾಜಿಕ–ಆರ್ಥಿಕ ಸಮೀಕ್ಷೆ; ಸಂಪೂರ್ಣ ಜಲಾಶಯ ಮಟ್ಟದ (ಎಫ್‌ಆರ್‌ಎಲ್) ಸಮೀಕ್ಷೆ;
- ಗುತ್ತಿಗೆ ಒಡಂಬಡಿಕೆಗಳು, ವಾರ್ಷಿಕ ಕಾರ್ಯಕ್ರಮಗಳು/ವಾರ್ಷಿಕ ಪೂರ್ವಭಾವಿ ಯೋಜನೆಗಳು, ಆಯವ್ಯಯಗಳು.

## ಕೃತಜ್ಞತೆ

**2.2.10** ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ ಇಲಾಖೆ, ಕಂಪನಿ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರು, ಬಾಗಲಕೋಟೆ ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಇವರುಗಳು ನೀಡಿದ ಸಹಕಾರಕ್ಕಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

ಲೆಕ್ಕಪರಿಶೋಧನೆಯನ್ನು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನೆಗೆ ಸಂಬಂಧಿತ ಮಾನದಂಡಗಳ ಅನುಸಾರ ನಡೆಸಲಾಗಿದೆ.

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

**2.2.11** ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಸವಿವರವಾದ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## ಕಾರ್ಯನೀತಿ ಮತ್ತು ಸಮೀಕ್ಷೆ

### ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯ ಅನುಪಸ್ಥಿತಿ

**ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಜಾರಿಗೆ ಬಂದಿದ್ದ ಕಾಯಿದೆ ಮತ್ತು ಕಾರ್ಯನೀತಿಗೆ ಅನುಗುಣವಾಗಿ ಕಾರ್ಯಗತಗೊಳಿಸುವ ಬದಲಾಗಿ ಸರ್ಕಾರವು ಹೊರಡಿಸಿದ ಕಾರ್ಯಾಂಗ ಆದೇಶಗಳ ಮೂಲಕ ಕಾರ್ಯಗತಗೊಳಿಸಲಾಯಿತು.**

**2.2.12** ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಜನತೆಯು ಬಲವಂತವಾಗಿ ಸ್ಥಳಾಂತರಗೊಳ್ಳುವಲ್ಲಿಗೆ ದಾರಿ ಮಾಡಿಕೊಟ್ಟಿತು, ಅವರ ಭೂಮಿ, ಜೀವನೋಪಾಯ ಮತ್ತು ವಸತಿಯಿಂದ ಅವರನ್ನು ವಂಚಿಸಲಾಯಿತು ಹಾಗೂ ಅವರ ಸಾಮಾಜಿಕ–ಸಾಂಸ್ಕೃತಿಕ ಪರಿಸರದಿಂದ ಅವರನ್ನು ಬೇರುಸಹಿತ ನಾಶಮಾಡಲಾಯಿತು. ಸರ್ಕಾರವು, ಸ್ಥಳಾಂತರಗೊಂಡ ವ್ಯಕ್ತಿಗಳು ಹಾಗೂ ಕುಟುಂಬಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಒಂದು ನಿರ್ದಿಷ್ಟ ಕಾರ್ಯನೀತಿಯನ್ನು ಹೊಂದಿರಬೇಕಿತ್ತು. ಇದು, ನಿರ್ಣಯವನ್ನು ತೆಗೆದುಕೊಳ್ಳುವ ಸಲುವಾಗಿ ಹಾಗೂ ಕಾರ್ಯಕಾರೀ ಅಧಿಕಾರಿಗಳು ಕಾರ್ಯಗತಗೊಳಿಸುವುದಕ್ಕಾಗಿ ಹಾಗೂ ಕಾರ್ಯಗತಗೊಳಿಸಿದ ನಂತರದ ಅದರ ಪ್ರಭಾವವನ್ನು ನಿರ್ಧಾರಣೆ ಮಾಡುವುದಕ್ಕಾಗಿ ಒಂದು ಮಾನದಂಡವಾಗುತ್ತದೆ. ಕಾರ್ಯನೀತಿಯ ನಿರೂಪಣೆಯ ಲೆಕ್ಕಪರಿಶೋಧನೆ ಈ ಕೆಳಗಿನ ಲೋಪದೋಷಗಳನ್ನು ತೋರಿಸಿಕೊಟ್ಟಿತು:

- ಯೋಜನೆಯಿಂದ ಸ್ಥಳಾಂತರಿತ ವ್ಯಕ್ತಿಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಮೇಲೆ ವಿವಿಧ ಕಾರ್ಯನೀತಿಗಳನ್ನು ಚಿಂತಿಸಿದಂತೆ ಸರ್ಕಾರವು ಕರ್ನಾಟಕ ಯೋಜನೆಯಿಂದ ಸ್ಥಳಾಂತರಿತ ವ್ಯಕ್ತಿಗಳ ಪುನರ್ವಸತಿ ಅಧಿನಿಯಮ, 1987ನ್ನು ಅಧಿಸೂಚನೆ ಹೊರಡಿಸಿತು (ನವಂಬರ್ 1994). ಆದರೆ ಸರ್ಕಾರವು ಈ ಅಧಿನಿಯಮವನ್ನು ಜಾರಿಗೊಳಿಸಲಿಲ್ಲ. ಭಾರತದ ರಾಷ್ಟ್ರಪತಿಯವರಿಂದ ಒಪ್ಪಿಗೆಯನ್ನು ಪಡೆಯುವಲ್ಲಿನ ವಿಳಂಬ ಹಾಗೂ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ವಿಶ್ವ ಬ್ಯಾಂಕಿನ ಜೊತೆ ಸಂಧಾನಗಳನ್ನು ತ್ವರಿತಗೊಳಿಸುವ ಅಗತ್ಯತೆಯಿದ್ದ ಕಾರಣ ಅಧಿನಿಯಮವನ್ನು ಜಾರಿಗೊಳಿಸಲಿಲ್ಲ ಎಂಬುದಾಗಿ ಸರ್ಕಾರವು ತಿಳಿಸಿತು. ಆಲಮಟ್ಟಿ ಅಣೆಕಟ್ಟಿನ ಜಲಾಶಯ ಮಟ್ಟ 519.60 ಮೀಟರುಗಳಿಂದ ಮುಂದಕ್ಕೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯಗತಗೊಳಿಸುವುದನ್ನು ಈಗಲೂ ಮುಂದುವರೆಸಿದ್ದಿತಾದರೂ (2015–16) ತದನಂತರ ಅಧಿನಿಯಮವನ್ನು ಕಾರ್ಯಗತಗೊಳಿಸುವುದಕ್ಕೆ ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

- ಭೂಮಿ ಹಾಗೂ ಇತರೆ ನಿರ್ಮಾಣಗಳನ್ನು ಕಳೆದುಕೊಂಡಿದ್ದಕ್ಕಾಗಿ ಪಿಡಿಪಿ/ಪಿಡಿಎಫ್‌ಗಳಿಗೆ ಪಾವತಿಸಬೇಕಾದ ಹಣಕಾಸಿನ ಪರಿಹಾರದ ಪ್ರಮಾಣವನ್ನು ಹಾಗೂ ನೀಡಬೇಕಾದ ವಿವಿಧ ಪ್ರಯೋಜನಗಳನ್ನು ಮಾತ್ರ ನಿರ್ದಿಷ್ಟಪಡಿಸಿ ಸರ್ಕಾರವು ಕಾರ್ಯಾಂಗ ಆದೇಶಗಳನ್ನು ಜಾರಿಗೊಳಿಸಿತ್ತು (1989–95). ಸಾಮಾಜಿಕ–ಆರ್ಥಿಕ ಸಮೀಕ್ಷೆ, ಪಿಡಿಪಿ/ಪಿಡಿಎಫ್‌ಗಳನ್ನು ಗುರುತಿಸುವಿಕೆ, ಭೂ ಸ್ವಾಧೀನ, ವಿವಿಧ ಪ್ರಾಧಿಕಾರಗಳ ಪಾತ್ರಗಳು, ವಿವಿಧ ಕಾರ್ಯಚಟುವಟಿಕೆಗಳನ್ನು ಪೂರ್ಣಗೊಳಿಸಲು ಕಾಲಮಿತಿ, ಇತ್ಯಾದಿಗಳನ್ನು ಒಳಗೊಂಡಂತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ಒಳಗೊಂಡಿರುವ ಪ್ರಕ್ರಿಯೆಗಳನ್ನು ಅದು ತಿಳಿಸಿರಲಿಲ್ಲ. ಅಕ್ಟೋಬರ್ 2007ರಲ್ಲಿ ಅಧಿಸೂಚಿತಗೊಂಡಿದ್ದ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿ, 2007ನ್ನೂ ಸಹ ಸರ್ಕಾರವು ಅಳವಡಿಸಿಕೊಂಡಿರಲಿಲ್ಲ. ಬದಲಾಗಿ, ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿ, 2007ನ್ನು ಅಧಿಸೂಚನೆ ಹೊರಡಿಸಿದನಂತರ ಜಾರಿಗೊಳಿಸಲಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಚಟುವಟಿಕೆಗಳಿಗೂ, 1989–95ರಲ್ಲಿ ನೀಡಿದ್ದ ಕಾರ್ಯನಿರ್ವಾಹಕ ಆದೇಶಗಳನ್ನು ಜಾರಿಗೊಳಿಸುವುದನ್ನು ಮುಂದುವರೆಸಿಕೊಂಡು ಹೋಗಿತ್ತು.

- ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯು, 'ಪಿಡಿಎಫ್‌ಗಳಿಗೆ ಜಲಾನಯನ ಪ್ರದೇಶದಲ್ಲಿ ಭೂಮಿಯನ್ನು ಹಂಚುವ' ಒಂದು ಪ್ರಮುಖ ಅನುವನ್ನು ಚಿಂತಿಸಿತ್ತು. ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯು, ಜಮೀನುಗಳನ್ನು ಒಟ್ಟುಗೂಡಿಸುವ ಮೂಲಕ ಯೋಜನೆಗಳ ಜಲಾನಯನ ಪ್ರದೇಶಗಳಲ್ಲಿ ಪಿಡಿಎಫ್‌ಗಳಿಗೆ ಜಮೀನನ್ನು ಒದಗಿಸುವುದಕ್ಕಾಗಿ ರಾಜ್ಯ ಸರ್ಕಾರಗಳು ಸೂಕ್ತ ಯೋಜನೆಗಳನ್ನು ರೂಪಿಸತಕ್ಕದ್ದು ಎಂಬುದನ್ನೂ ಸಹ ನಿರ್ದಿಷ್ಟಪಡಿಸಿತ್ತು. ಸರ್ಕಾರವು ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ಹಾಗೂ ಈ ನಿಟ್ಟಿನಲ್ಲಿ ಯಾವುದೇ ಕಾರ್ಯನೀತಿಯನ್ನು ರೂಪಿಸುವಲ್ಲಿ ವಿಫಲಗೊಂಡಿತಾದ್ದರಿಂದ, ಕೃಷಿ ಭೂಮಿಯನ್ನು (ನಾರಾಯಣಪುರ ಅಣೆಕಟ್ಟಿನಡಿಯಲ್ಲಿ ಮುಳುಗಡೆಗೊಂಡ 14 ಗ್ರಾಮಗಳಿಗೆ ಸಂಬಂಧಿಸಿದಂತೆ 307.27 ಎಕರೆಗಳು) ಕಳೆದುಕೊಂಡ ಪಿಡಿಎಫ್‌ಗಳು ಜಲಾನಯನ ಪ್ರದೇಶದಲ್ಲಿ ಜಮೀನನ್ನು ಹಂಚುವುದರಿಂದ ವಂಚಿತರಾದರು.

- ವಿತ್ತೀಯ ರೂಪದಲ್ಲಿ ತಿಳಿಸಲಾಗಿರುವ ಪುನರ್ವಸತಿ ಅನುದಾನ ಹಾಗೂ ಇನ್ನಿತರೆ ಪ್ರಯೋಜನಗಳನ್ನು ಬಳಕೆದಾರರ ದರ ಸೂಚ್ಯಂಕದ ಅನುಸಾರ ನಿರ್ಧಾರಣೆ ಮಾಡಬೇಕು ಹಾಗೂ ಅದನ್ನು ಸೂಕ್ತ ಕಾಲಾವಧಿಗಳಲ್ಲಿ ಸೂಕ್ತ ಸರ್ಕಾರವು ಪರಿಷ್ಕರಿಸತಕ್ಕದ್ದು ಎಂಬುದನ್ನೂ ಸಹ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯು ಚಿಂತಿಸಿತ್ತು. ಸರ್ಕಾರವು, ಕಾರ್ಯನೀತಿಯನ್ನು ಉಲ್ಲಂಘಿಸಿದಂತೆ, ವಿವಿಧ ವಿತ್ತೀಯ ಪ್ರಯೋಜನಗಳನ್ನು 1989–95ರಲ್ಲಿ ನಿಗದಿಗೊಳಿಸಲ್ಪಟ್ಟಿದ್ದರೂ ಸಹ, ಸೂಚ್ಯಂಕದ ಅನುಸಾರ ನಿರ್ಧಾರಣೆ ಮಾಡಲು ಯಾವುದೇ ಅನುವನ್ನೂ ಮಾಡಿರಲಿಲ್ಲ ಹಾಗೂ ಅದೇ ಪ್ರಯೋಜನಗಳನ್ನು 2015–16ರಲ್ಲಿಯೂ ನೀಡುವುದನ್ನು ಮುಂದುವರೆಸಿತ್ತು. ತತ್ಪರಿಣಾಮವಾಗಿ, ತಮ್ಮ ಕೃಷಿ ಭೂಮಿಯನ್ನು ಕಳೆದುಕೊಂಡಿದ್ದ ಪಿಡಿಎಫ್‌ಗಳಿಗೆ ಅಮರ್ಪಕ ಪರಿಹಾರವನ್ನು ನೀಡಿದ್ದಲ್ಲದೆ ಜಲಾಶಯ ಪ್ರದೇಶದಲ್ಲಿ ಜಮೀನು ಹಂಚಿಕೆಯಿಂದಲೂ ವಂಚಿಸಲಾಯಿತು.

- ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಪೂರ್ಣಗೊಳಿಸಲು ರಾಜ್ಯಗಳು ಒಂದು ಕಾಲಮಿತಿಯನ್ನು ನಿಗದಿಗೊಳಿಸತಕ್ಕದ್ದು ಎಂಬುದಾಗಿ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯು ನಿರ್ದಿಷ್ಟಪಡಿಸಿತ್ತಾದರೂ, ಕರ್ನಾಟಕ ಸರ್ಕಾರವು ಯಾವುದೇ ಕಾಲಮಿತಿಯನ್ನು ನಿರ್ದಿಷ್ಟಪಡಿಸಿರಲಿಲ್ಲ. ತತ್ಪರಿಣಾಮವಾಗಿ, ಆಲಮಟ್ಟಿ ಜಲಾಶಯದ ಮಟ್ಟ 521 ಮೀಟರುಗಳು ಹಾಗೂ 523 ಮೀಟರುಗಳ ನಡುವಿನಲ್ಲಿ ಬಾಗಲಕೋಟೆ ಪಟ್ಟಣದಲ್ಲಿ ತೊಂದರೆಗೆ ಈಡಾಗಿದ್ದ (6,329 ಪಿಡಿಎಫ್‌ಗಳು) ಜನತೆಗಾಗಿ ನವಂಬರ್ 2002ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಹಾಗೂ ಜನವರಿ 2007 ಮತ್ತು ಸೆಪ್ಟಂಬರ್ 2009ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ನಾರಾಯಣಪುರ ಜಲಾಶಯದ ಹಿನ್ನೀರಿನ ಅಡಿಯಲ್ಲಿ ತೊಂದರೆಗೆ ಈಡಾಗಿದ್ದ 14 ಗ್ರಾಮಗಳ (4,274 ಪಿಡಿಎಫ್‌ಗಳು) ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಕಂಡಿಕೆ 2.2.15, 2.2.16 ಹಾಗೂ 2.2.18.1ರಲ್ಲಿ ವಿಮರ್ಶಿಸಿರುವಂತೆ 6ರಿಂದ 13 ವರ್ಷಗಳ ಗಮನಾರ್ಹ ಅವಧಿಯು ಕಳೆದನಂತರವೂ ಪೂರ್ಣಗೊಂಡಿರಲಿಲ್ಲ (ಸೆಪ್ಟೆಂಬರ್ 2015).

ಹೀಗೆ, ರಾಜ್ಯಕ್ಕೆ ಒಂದು ನಿರ್ದಿಷ್ಟ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿಯ ಅನುಪಸ್ಥಿತಿಯಲ್ಲಿ ಹಾಗೂ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿಯ ಅನುವುಗಳ ಅಳವಡಿಕೆ ಮಾಡಿಕೊಳ್ಳದಿದ್ದುದು, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಚಟುವಟಿಕೆಗಳು ವಿಳಂಬಗೊಂಡಿದ್ದು, ಪಿಡಿಎಫ್‌ಗಳು ತಮ್ಮ ಸಲ್ಲಬೇಕಾಗಿದ್ದ ಸವಲತ್ತುಗಳಿಂದ ವಂಚಿತವಾದವು.

ಸರ್ಕಾರವು ಕರ್ನಾಟಕ ಯೋಜನೆಯಿಂದ ಸ್ಥಳಾಂತರಿತ ವ್ಯಕ್ತಿಗಳ ಪುನರ್ವಸತಿ ಅಧಿನಿಯಮ, 1987ನ್ನು ತದನಂತರ ರದ್ದುಗೊಳಿಸಲಾಗಿತ್ತು ಎಂಬುದಾಗಿ ಉತ್ತರಿಸುತ್ತಾ (ಡಿಸೆಂಬರ್ 2015) ಜಲಾನಯನ ಪ್ರದೇಶದಲ್ಲಿ 'ಭೂಮಿಗಾಗಿ ಭೂಮಿ'ಯ ಅನುವು ಕಾರ್ಯಗತಗೊಳಿಸುವ ದೃಷ್ಟಿಯಿಂದ ಕಾರ್ಯಸಾಧ್ಯವಲ್ಲ ಎಂಬುದಾಗಿ ಕಂಡುಬಂದಿತು ಎಂದು ತಿಳಿಸಿತು. ಭೂಮಿಯನ್ನು ಕಳೆದುಕೊಳ್ಳುವ ಹಾಗೂ ಪಿಡಿಎಫ್‌ಗಳಿಗೆ, ಸ್ವಾಧೀನಪಡಿಸಿಕೊಳ್ಳಲಾದ ಭೂಮಿಗೆ ಪಾವತಿಸಲಾಗುವ ಪರಿಹಾರದ ಜೊತೆಗೆ ಕೃಷಿ ಭೂಮಿಯನ್ನು ಖರೀದಿಸುವುದಕ್ಕಾಗಿ ₹ 60,000ದವರೆಗೆ ಹಣಕಾಸಿನ ನೆರವನ್ನು ವಿಸ್ತರಿಸುವುದು, ಕೃಷಿ ಭೂಮಿಯನ್ನು ಖರೀದಿಸುವುದಕ್ಕಾಗಿ ಮುದ್ರಾಂಕ ಸುಂಕದ ವಿನಾಯಿತಿ ಹಾಗೂ 'ಸಿ' ಮತ್ತು 'ಡಿ' ಗುಂಪಿನ ಪ್ರವರ್ಗಗಳ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ನೀಡುವುದಕ್ಕೆ ಅಗತ್ಯ ಅನುವನ್ನು ಮಾಡಲಾಗಿತ್ತು. ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯನ್ನು ಅಳವಡಿಸಿಕೊಳ್ಳುವುದನ್ನು ಸಂಬಂಧಿತ ರಾಜ್ಯಗಳ ಆಯ್ಕೆಗೆ ಬಿಡಲಾಗಿತ್ತು ಹಾಗೂ ರಾಜ್ಯ ಸರ್ಕಾರಗಳು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅಡಿಯಲ್ಲಿ ನೀಡಲಾಗಿರುವ ಕೆಲವು ಪ್ರಯೋಜನಗಳು ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯಲ್ಲಿ ಅನುವು ಮಾಡಿರುವುದಕ್ಕಿಂತ ಹೆಚ್ಚಿನ ಅನುಕೂಲಕರವಾಗಿವೆ ಎಂಬುದಾಗಿಯೂ ಉತ್ತರಿಸಿತು.

ನಿರ್ಗಮನ ಸಭೆಯಲ್ಲಿ, ವಿತ್ತೀಯ ನೆರವುಗಳನ್ನು ದರ ಸೂಚ್ಯಂಕದ ಅನುಸಾರ ನಿರ್ಧಾರಣೆ ಮಾಡಿರಲಿಲ್ಲ ಎಂಬುದನ್ನು ಸರ್ಕಾರವು ಒಪ್ಪಿಕೊಂಡಿತು (ಡಿಸೆಂಬರ್ 2015). ಕಾರ್ಯನೀತಿಯನ್ನು ರೂಪಿಸುವುದಕ್ಕೆ ಸಂಬಂಧಿಸಿದಂತೆ, ಯೋಜನೆಯನ್ನು ಕಾರ್ಯಗತಗೊಳಿಸುವುದು ತುರ್ತಾಗಿ ಆಗಬೇಕಿದ್ದಿತಾದ್ದರಿಂದ ಹಾಗೂ ಭಾರತದ ರಾಷ್ಟ್ರಪತಿಯವರಿಂದ ಒಪ್ಪಿಗೆಯನ್ನು ಪಡೆಯುವುದರಲ್ಲಿ ವಿಪರೀತ ವಿಳಂಬವಾಗಿದ್ದರಿಂದ, ಕಾರ್ಯಾಂಗ ಆದೇಶಗಳನ್ನು ನೀಡಲಾಗಿತ್ತು ಹಾಗೂ ರಾಷ್ಟ್ರೀಯ ಕಾರ್ಯನೀತಿಯು ತದನಂತರದ ಹಂತದಲ್ಲಿ ಜಾರಿಗೆ ಬಂದಿತ್ತು ಎಂಬುದಾಗಿ ಸರ್ಕಾರವು ತಿಳಿಸಿತು.

ಉತ್ತರವು ಸ್ವೀಕಾರಾರ್ಹವಲ್ಲ. ಒತ್ತಾಯಪೂರ್ವಕವಾಗಿ ಸ್ಥಳಾಂತರಗೊಳಿಸಲ್ಪಟ್ಟಿರುವ ಎಲ್ಲಾ ಯೋಜನೆಗಳಲ್ಲಿಯೂ ಕಾರ್ಯನೀತಿಯು ಅನ್ವಯಗೊಳ್ಳಬೇಕು ಎಂಬುದಾಗಿ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯು ನಿರ್ದಿಷ್ಟಪಡಿಸಿದೆ (ಕಂಡಿಕೆ 1.3). ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಿಗಾಗಿ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯು ಜಾರಿಗೆ ಬಂದನಂತರ, ಅದನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ಅಡಚಣೆಗಳೂ ಇರಲಿಲ್ಲ, ಮುಂದುವರೆದು, ಈ ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಿರುವಂತೆ ರಾಜ್ಯ ಸರ್ಕಾರವು ನೀಡಿರುವ ಪ್ರಯೋಜನಗಳು ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯಲ್ಲಿ ಚಿಂತಿಸಲಾಗಿರುವವುಗಳಿಗೆ ಅನುಗುಣವಾಗಿರಲಿಲ್ಲ.

**ಕೋಷ್ಟಕ ಸಂಖ್ಯೆ 2.2.1 ಸರ್ಕಾರದಿಂದ ನೀಡಲಾಗಿದ್ದ ಪ್ರಯೋಜನಗಳು ಹಾಗೂ ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯಲ್ಲಿ ಚಿಂತಿಸಲಾಗಿದ್ದವುಗಳನ್ನು ತೋರಿಸುವ ತ:ಖ್ತೆ**

| ಪ್ರಯೋಜನಗಳ ಸ್ವರೂಪ | ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯಲ್ಲಿ ಚಿಂತಿಸಲಾಗಿದ್ದ ಪ್ರಯೋಜನಗಳು | ರಾಜ್ಯ ಸರ್ಕಾರದಿಂದ ನೀಡಲಾಗಿದ್ದ ಪ್ರಯೋಜನಗಳು |
|---|---|---|
| ಭೂಮಿಯನ್ನು ಕಳೆದುಕೊಂಡ ಹಾಗೂ ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬಗಳಿಗೆ ಭೂಮಿ ಹಂಚಿಕೆ | ಗರಿಷ್ಠ ಒಂದು ಹೆಕ್ಟೇರಿನಷ್ಟು ನೀರಾವರಿ ಜಮೀನು ಅಥವಾ ಎರಡು ಹೆಕ್ಟೇರುಗಳಷ್ಟು ನೀರಾವರಿ ಸೌಲಭ್ಯವನ್ನು ಹೊಂದಿರದ ಭೂಮಿ ಅಥವಾ ಕೃಷಿ ಮಾಡಬಹುದಾದ ಪಾಳುಬಂಜರು ಭೂಮಿ | ಯೋಜನೆಯಿಂದ ಸ್ಥಳಾಂತರಗೊಂಡಿರುವ ಪ್ರತೀ ಕುಟುಂಬಕ್ಕೆ ಭೂಮಿ ಹಾಗೂ ಹೆಚ್ಚುವರಿ ಪ್ರೋತ್ಸಾಹಧನಕ್ಕಾಗಿ ₹ 60,000ದವರೆಗೆ ಪರಿಹಾರದ ಹಣ |
| ಭೂಮಿಗಾಗಿ ಭೂಮಿಯನ್ನು ನೀಡದಿದ್ದಲ್ಲಿ ಭೂಮಿಯನ್ನು | 750 ದಿನಗಳ ಕನಿಷ್ಠ ದಿನಗೂಲಿಗಳು | ₹ 2,800 ಜೀವನೋಪಾಯ ಭತ್ಯೆ |

| | | |
|---|---|---|
| ಕಳೆದುಕೊಂಡವರಿಗೆ ಕೃಷಿ ಕೂಲಿಯನ್ನು ನೀಡುವುದು | | |
| ತೊಂದರೆಗೆ ಈಡಾದ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಒಂದು ಸಲದ ನೆರವು | 500 ದಿನಗಳ ಹೆಚ್ಚುವರಿ ದಿನಗೂಲಿಗಳು | ಅಂತಹ ಹೆಚ್ಚುವರಿ ಪ್ರಯೋಜನವನ್ನು ನೀಡಿರಲಿಲ್ಲ |
| ಕುಟುಂಬಗಳನ್ನು ಸ್ಥಳಾಂತರಿಸಲು ಸಾರಿಗೆ ವ್ಯವಸ್ಥೆ | ₹ 10,000 | ಗರಿಷ್ಠ ₹ 2,500 |
| ಗ್ರಾಮೀಣ ಕರಕುಶಲ ಕೆಲಸಗಾರರಿಗೆ ಕೆಲಸ ಮಾಡುವುದಕ್ಕಾಗಿ ಶೆಡ್ಡುಗಳ ನಿರ್ಮಾಣ | ಕನಿಷ್ಠ ₹ 25,000 | ಅಂತಹ ಪ್ರಯೋಜನವನ್ನು ನೀಡಿರಲಿಲ್ಲ. |
| ಉದ್ಯೋಗ | ಸಣ್ಣ ಕುಟುಂಬವೊಂದಕ್ಕೆ ಕಡೆಯ ಪಕ್ಷ ಓರ್ವ ವ್ಯಕ್ತಿಗೆ ಉದ್ಯೋಗ | ಸರ್ಕಾರದ ಸಿ ಮತ್ತು ಡಿ ಪ್ರವರ್ಗದ ಹುದ್ದೆಗಳಲ್ಲಿ ಶೇಕಡಾ 5ರಷ್ಟು ಮೀಸಲಾತಿ |
| ದರ ಸೂಚ್ಯಂಕದ ನಿರ್ಧಾರಣೆ ಸೌಲಭ್ಯ | ಈ ಕಾರ್ಯನೀತಿಯು ಜಾರಿಗೆ ಬಂದನಂತರದ ಏಪ್ರಿಲ್ ಮೊದಲ ದಿನದೊಂದಿಗೆ ಬಳಕೆದಾರರ ದರ ಸೂಚ್ಯಂಕದ ಅನುಗುಣವಾಗಿ ಪ್ರಯೋಜನಗಳನ್ನು ನೀಡತಕ್ಕದ್ದು ಹಾಗೂ ಸೂಕ್ತ ಕಾಲಾವಧಿಗಳಲ್ಲಿ ಇದನ್ನು ಪರಿಷ್ಕರಿಸತಕ್ಕದ್ದು. | ಬಳಕೆದಾರರ ದರ ಸೂಚ್ಯಂಕದ ಅನುಗುಣವಾಗಿ ಪ್ರಯೋಜನಗಳನ್ನು ನೀಡಿರಲಿಲ್ಲ ಹಾಗೂ 1989–95ರಲ್ಲಿ ಪ್ರಕಟಿಸಿದ್ದ ಪ್ರಯೋಜನಗಳು ಇನ್ನೂ ಬದಲಾವಣೆಗೊಂಡಿರಲಿಲ್ಲ. |

***ಸಾಮಾಜಿಕ–ಆರ್ಥಿಕ ಸಮೀಕ್ಷೆ***

**ಸಾಮಾಜಿಕ–ಆರ್ಥಿಕ ಸಮೀಕ್ಷೆಯು ಸ್ಥಳಾಂತರಗೊಂಡ ಕುಟುಂಬಗಳ ಸ್ಥಿತಿಗತಿಯನ್ನು ಹಾಗೂ ಸಮಾಜದ ಹಿಂದುಳಿದ ಮತ್ತು ತೊಂದರೆಗೊಳಗಾಗುವ ಕುಟುಂಬಗಳನ್ನು ಸೆರೆಹಿಡಿಯಲಿಲ್ಲ.**

**2.2.13**. ಯಾವುದೇ ಒಂದು ಅರ್ಥಪೂರ್ಣ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನಕ್ಕಾಗಿ, ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬಗಳ ಯೋಜನೆಯನ್ನು ಪ್ರಾರಂಭಿಸುವುದಕ್ಕೆ ಮುಂಚಿನ ಅವಧಿಯ ಸ್ಥಿತಿಗತಿಗಳ ಬಗ್ಗೆ ಮೂಲಮಾಹಿತಿಯನ್ನು ಹೊಂದಿರುವುದು ಅತ್ಯಗತ್ಯ. ಈ ಮೂಲಮಾಹಿತಿಯನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಫಲವಾಗಿ ಪಿಡಿಎಫ್‌ಗಳ ಜೀವನದ ಸ್ಥಿತಿಗತಿಯಲ್ಲಿನ ತದನಂತರದ ಬಂದಿರುವ ಬದಲಾವಣೆಯೊಂದಿಗೆ ತುಲನೆ ಮಾಡುವ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಹುದು. ಇದು, ಪಿಡಿಎಫ್‌ಗಳ ಜೀವನ ಶೈಲಿಯಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ನಂತರದಲ್ಲಿ ನಿರೀಕ್ಷಿತ ಮಾರ್ಗದಲ್ಲಿ ಒಂದು ಸಕಾರಾತ್ಮಕ ಬದಲಾವಣೆಯಾಗಿದೆಯೇ ಎಂಬುದನ್ನು ನಿರ್ಧಾರಣೆ ಮಾಡಲು ಸಹಾಯ ಮಾಡುವುದು.

ಸಾಮಾಜಿಕ–ಆರ್ಥಿಕ ಸಮೀಕ್ಷೆಯು ವಿವಿಧ ಪ್ರಮಿತಿಗಳ ಮೇಲಿನ ಮಾಹಿತಿಯಾದ ಶಾಶ್ವತವಾಗಿ ಜೊತೆಯಲ್ಲಿ ನೆಲೆಸಿದ್ದ ಕುಟುಂಬದ ಸದಸ್ಯರು, ತೊಂದರೆಗೆ ಈಡಾದ ಪ್ರದೇಶದಲ್ಲಿ ಯಾವುದಾದರೂ ವ್ಯಾಪಾರ, ವ್ಯವಹಾರ, ಉದ್ಯೋಗ ಅಥವಾ ವೃತ್ತಿಯಲ್ಲಿ ತೊಡಗಿದ್ದುದು, ತಮ್ಮ ಮನೆ, ಕೃಷಿ ಭೂಮಿ, ಉದ್ಯೋಗ ಕೃಷಿ ಹಾಗೂ ಕೃಷಿಯೇತರ ಕೂಲಿಗಾರರನ್ನು ಕಳೆದುಕೊಳ್ಳಬಹುದಾದ ಸಂಭವವಿರುವ ಅಥವಾ ಕಳೆದುಕೊಂಡಿರುವ ಕುಟುಂಬಗಳು, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪ್ರವರ್ಗಗಳಿಗೆ ಸೇರಿದ ಕುಟುಂಬಗಳು, ವಿಕಲಾಂಗರು, ನಿರ್ಗತಿಕರು, ಅನಾಥರು, ವಿಧವೆಯರು, ಮದುವೆಯಾಗದ ಹೆಣ್ಣುಮಕ್ಕಳು, ಬದಲಿ ಜೀವನೋಪಾಯವನ್ನು ಒದಗಿಸಿರದ ಅಥವಾ ಒದಗಿಸಲು ಸಾಧ್ಯವಾಗಿರದ ಹಾಗೂ ಒಂದು ಕುಟುಂಬದ ಸದಸ್ಯರು ಎಂಬುದಾಗಿ ಪರಿಗಣಿಸಿರದ ಐವತ್ತು ವರ್ಷಗಳನ್ನು ದಾಟಿದ ವ್ಯಕ್ತಿಗಳು ಭೂಮಿಯನ್ನು ಹೊಂದಿರದ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು, ಇತ್ಯಾದಿಗಳನ್ನು ಒಳಗೊಂಡಿರತಕ್ಕದ್ದು ಎಂಬುದಾಗಿ ಕಾರ್ಯನೀತಿಯು ನಿರ್ದಿಷ್ಟಪಡಿಸಿದೆ.

ಸರ್ಕಾರವು, ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ನಡೆಸಲು ಯಾವುದೇ ನಿರ್ದಿಷ್ಟ ಮಾನದಂಡವನ್ನೂ ಕಡ್ಡಾಯಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪಿಡಿಎಫ್‌ಗಳಿಗೆ ಸಂಬಂಧಿಸಿದಂತೆ, ಯೋಜನೆಯಿಂದ ಸ್ಥಳಾಂತರಗೊಳ್ಳುವುದಕ್ಕೆ ಮುಂಚಿನ ಸ್ಥಿತಿಗತಿಯನ್ನು ನಿರ್ಧಾರಣೆ ಮಾಡಿರಲಿಲ್ಲ. ಸರ್ಕಾರವು ತಯಾರಿಸಿದ್ದ (ಜೂನ್ 2012) ಸಾಮಾಜಿಕ–ಆರ್ಥಿಕ ಸಮೀಕ್ಷಾ ವರದಿಗಳಲ್ಲಿ ನಾರಾಯಣಪುರ ಅಣೆಕಟ್ಟಿನಡಿಯಲ್ಲಿ ಮುಳುಗಡೆಗೊಂಡ 14 ಗ್ರಾಮಗಳಿಗೆ ಸಂಬಂಧಿಸಿದಂತೆ ಪಿಡಿಎಫ್‌ಗಳ ವರಮಾನ, ಗ್ರಾಮೀಣ ಕುಶಲಕರ್ಮಿಗಳ ವಿವರಗಳು, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ

ಪಂಗಡ ಪ್ರವರ್ಗಗಳಿಗೆ ಹಾಗೂ ಮನನೊಂದಿರುವ ಪ್ರವರ್ಗಗಳಿಗೆ ಸೇರಿದ್ದ ಕುಟುಂಬಗಳ ವಿವರಗಳನ್ನು ಒಳಗೊಂಡಿರಲಿಲ್ಲ. ಸರ್ಕಾರವು ಸಮಾಜದ ಕೆಲವು ವರ್ಗಗಳಿಗೆ ಆದ್ಯತೆಯನ್ನು ಅಥವಾ ವಿಶೇಷ ಗಮನವನ್ನು ಹರಿಸುವ ರೀತಿಯಲ್ಲಿ ಸಮೀಕ್ಷಾ ವರದಿಗಳು ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯಲ್ಲಿ ಚಿಂತಿಸಲಾಗಿರುವ ವಿವಿಧ ಪರಿಮಿತಿಗಳ ಮೇಲಿನ ಮಾಹಿತಿಯನ್ನು ಪ್ರಕ್ಷೇಪಿಸಿರಬೇಕಿತ್ತು. ಅದಕ್ಕೆ ವಿರುದ್ಧವಾಗಿ, ಅದು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅಡಿಯಲ್ಲಿ ಅರ್ಹ ಪಿಡಿಎಫ್‌ಗಳನ್ನು ಗುರುತಿಸುವ ಏಕೈಕ ಉದ್ದೇಶಕ್ಕಾಗಿ ಮಾತ್ರ ಉಪಯೋಗಕ್ಕೆ ಬಂದಿತ್ತು.

ಅಗತ್ಯ ಮಾಹಿತಿಯ ಅನುಪಸ್ಥಿತಿಯಲ್ಲಿ ಯೋಜನೆಯಿಂದ ತೊಂದರೆಗೆ ಈಡಾದ ವ್ಯಕ್ತಿಗಳಿಗೆ ಹಾಗೂ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಚಿಂತಿಸಲಾಗಿದ್ದ ಪ್ರಯೋಜನಗಳನ್ನು ಒದಗಿಸುವಲ್ಲಿ ಸರ್ಕಾರಕ್ಕೆ ಸಾಧ್ಯವಾಗದಿದ್ದುದರಿಂದ ಸಮೀಕ್ಷಾ ವರದಿಗಳನ್ನು ತಯಾರಿಸುವುದರ ಮೂಲ ಉದ್ದೇಶವೇ ವಿಫಲವಾಗಿತ್ತು. ಪಿಡಿಎಫ್‌ಗಳಿಗೆ ಸಂಬಂಧಿಸಿದಂತೆ ಯೋಜನೆಯನ್ನು ಕಾರ್ಯಗತಗೊಳಿಸುವ ಮುಂಚಿನ ಅವಧಿಯ ಹಾಗೂ ಯೋಜನೆಯನ್ನು ಕಾರ್ಯಗತಗೊಳಿಸಿದನಂತರದ ಅವಧಿಯ ಜೀವನದ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಮೂಲಮಾಹಿತಿಯ ಅನುಪಸ್ಥಿತಿಯಲ್ಲಿ, ಪಿಡಿಎಫ್‌ಗಳ ಆರ್ಥಿಕ ಸ್ಥಿತಿಗತಿಯು ಉತ್ತಮಗೊಂಡಿತ್ತೇ ಅಥವಾ ಇಲ್ಲವೇ ಎಂಬುದನ್ನು ನಿರ್ಧಾರಣೆ ಮಾಡಲು ಸಾಧ್ಯವಿರಲಿಲ್ಲ.

ಪಿಡಿಎಫ್‌ಗಳ ಯೋಜನಾ–ಪೂರ್ವ ಸ್ಥಿತಿಗತಿ ಮತ್ತು ಕಳೆದುಕೊಂಡ ಭೂಮಿ ಮತ್ತು ಮನೆಯ ಪ್ರಮಾಣ ತೋರಿಸುವ ರೀತಿಯಲ್ಲಿ ತೊಂದರೆಗೆ ಈಡಾದ ಕುಟುಂಬಗಳ ವಿವರಗಳನ್ನು ಸಂಗ್ರಹಿಸಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015). ಸರ್ಕಾರಿ ಆದೇಶಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಯೋಜನಗಳನ್ನು ಅರ್ಹ ವ್ಯಕ್ತಿಗಳಿಗೆ ನೀಡಲಾಗಿದೆ. ಸಾಮಾಜಿಕ–ಆರ್ಥಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಹೊಸ ಭೂಸ್ವಾಧೀನ ಅಧಿನಿಯಮ, 2013ರಲ್ಲಿ ಚಿಂತಿಸಿರುವ ಅನುವುಗಳನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಮುಂದಿನ ಹಂತಗಳಲ್ಲಿ ಕಾರ್ಯಗತಗೊಳಿಸಲಾಗುವುದು.

ಸಮೀಕ್ಷಾ ವರದಿಗಳು ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯನೀತಿಯಲ್ಲಿ ಕಡ್ಡಾಯಗೊಳಿಸಿದ್ದಂತೆ, ತೊಂದರೆಗೆ ಈಡಾದ ಕುಟುಂಬಗಳ ಅಥವಾ ನೋವನ್ನು ಅನುಭವಿಸಿದ್ದ ಹಾಗೂ ಸಮಾಜದ ಆರ್ಥಿಕವಾಗಿ ಹಿಂದುಳಿದ ವರ್ಗದ ಸಾಮಾಜಿಕ–ಆರ್ಥಿಕ ಸ್ಥಿತಿಗತಿಯನ್ನು ಸೆರೆಹಿಡಿದಿರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

**ಶಿಫಾರಸ್ಸು ಸಂಖ್ಯೆ 1: ಸರ್ಕಾರವು, ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾಯ್ದೆ, 2007ರ ಮಾದರಿಯಂತೆ ರಾಜ್ಯಕ್ಕಾಗಿ ಒಂದು ನಿರ್ದಿಷ್ಟವಾದ ಹಾಗೂ ಸಮಗ್ರವಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿಯನ್ನು ರೂಪಿಸಬೇಕು, ಮತ್ತು ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬಗಳಿಗೆ ನ್ಯಾಯಯುತವಾಗಿ ಸಿಗಬೇಕಾಗಿದ್ದ ಸವಲತ್ತುಗಳು ಸಿಗುವಂತೆ ಮಾಡಲು ಅನುವುಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.**

**ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸಿದ್ದು**

**2.2.14**. ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಪ್ರಕ್ರಿಯೆಯು, ಒಂದು ಸಮೀಕ್ಷೆಯ ಮೂಲಕ, ತೊಂದರೆಗೆ ಈಡಾಗುವ ಗ್ರಾಮಗಳನ್ನು ಗುರುತಿಸುವಿಕೆಯನ್ನು, ಸ್ಥಳೀಯ ಅಧಿಕಾರಿಗಳ ಹಾಗೂ ಗ್ರಾಮ ಸಭೆಗಳ ಮೂಲಕ ಅವುಗಳ ಸ್ವಾಧೀನ, ಶಾಲೆಗಳು, ಆಸ್ಪತ್ರೆಗಳು, ಒಳಚರಂಡಿಗಳು, ಸಮುದಾಯ ಕೇಂದ್ರಗಳು, ಇತ್ಯಾದಿ ಅತ್ಯಗತ್ಯ ಮೂಲಭೂತಸೌಕರ್ಯಗಳ ಸಮರ್ಪಕ ಅನುವಿನೊಂದಿಗೆ ನಿರ್ಮಿಸಲ್ಪಟ್ಟಿರುವ ಪುನರ್ವಸತಿ ಕೇಂದ್ರಗಳು ಎಂಬುದಾಗಿ ಕರೆಯಲ್ಪಡುವ ಒಂದು ಹೊಸ ವಾಸ ಸ್ಥಳಕ್ಕೆ ಸ್ಥಳಾಂತರಿಸಲ್ಪಟ್ಟ ಕುಟುಂಬಗಳ/ಸ್ಥಳಾಂತರಿಸಲ್ಪಟ್ಟ ವ್ಯಕ್ತಿಗಳ ಪುನರ್ವಸತಿ ಹಾಗೂ ಸ್ವಾಧೀನಪಡಿಸಿಕೊಂಡ ನಂತರದಲ್ಲಿನ ಅವರುಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕಾಗಿ ತೊಂದರೆಗೆ ಈಡಾಗಿದ್ದ ಕುಟುಂಬಗಳಿಗೆ ನ್ಯಾಯಸಮ್ಮತವಾದ ಹಾಗೂ ನಿಖರವಾದ ಪರಿಹಾರವನ್ನು ಒದಗಿಸುವುದನ್ನು ಒಳಗೊಂಡಿತ್ತು. ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅಡಿಯಲ್ಲಿ ಸ್ಥಳಾಂತರಿಸಲ್ಪಟ್ಟ ಕುಟುಂಬಗಳ/ಸ್ಥಳಾಂತರಿಸಲ್ಪಟ್ಟ ವ್ಯಕ್ತಿಗಳಿಗೆ ಅರ್ಹವಿದ್ದ ಪ್ರಮುಖ ಪ್ರಯೋಜನಗಳೆಂದರೆ, ಪುನರ್ವಸತಿ ಕೇಂದ್ರಗಳಲ್ಲಿ ನಿವೇಶನದ ಹಂಚಿಕೆ, ಮನೆ

ಕಟ್ಟುವುದಕ್ಕಾಗಿ ಅನುದಾನ, ವರಮಾನ ಉತ್ಪತ್ತಿ ಮಾಡುವ ಅನುದಾನ, ಕಳೆದುಕೊಂಡಿರುವ ಭೂಮಿಗೆ ಪರಿಹಾರ, ಭೂಮಿ ಖರೀದಿ ಅನುದಾನ, ಸಾಗಾಣಿಕೆ ಭತ್ಯೆ ಹಾಗೂ ಜೀವನಾಧಾರ ಭತ್ಯೆಗಳಾಗಿದ್ದವು.

ನಾರಾಯಣಪುರ ಹಾಗೂ ಆಲಮಟ್ಟಿ ಜಲಾಶಯಗಳ ಹಿನ್ನೀರುಗಳ ಅಡಿಯಲ್ಲಿ ತೊಂದರೆಗೆ ಈಡಾದ ಜನತೆಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಒಂದು ಸಮೀಕ್ಷೆಯು, ಅತ್ಯಗತ್ಯ ಅನುಕೂಲತೆಗಳನ್ನು ಸೃಷ್ಟಿಸುವಲ್ಲಿ ವಿಳಂಬಗಳಿಂದ ಕೂಡಿದ ಮತ್ತು ನಿಕೃಷ್ಟಮಟ್ಟದ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದುದು, ಗಮನಾರ್ಹ ಅವಧಿಯು ಕಳೆದನಂತರವೂ ಪಿಡಿಎಫ್‌ಗಳಿಗೆ ನ್ಯಾಯಯುತವಾಗಿ ದೊರಕಿಸಿಕೊಡಬೇಕಿದ್ದ ಅನುಕೂಲತೆಗಳನ್ನು ನಿರಾಕರಿಸುವಲ್ಲಿಗೆ ದಾರಿಮಾಡಿಕೊಟ್ಟಿತು ಎಂಬುದನ್ನು ಈ ಕೆಳಗೆ ಸ್ಪಷ್ಟಪಡಿಸಿರುವಂತೆ ತೋರಿಸಿಕೊಟ್ಟಿತು.

***ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಪರೀತವಾದ ವಿಳಂಬ***

**14 ಗ್ರಾಮಗಳು ಕೇಂದ್ರ ಜಲ ಆಯೋಗದ ಪ್ರಮಾಣಕಗಳ ಒಳಗೆ ಇದ್ದರೂ ಕೂಡ ಈ ಗ್ರಾಮಗಳನ್ನು ನೀರಿನ ಪ್ರವಾಹಕ್ಕೆ ಸಿಲುಕಿದಾಗ ಮಾತ್ರ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ಸೇರಿಸಲಾಯಿತು.**



**ಬಿಸ್‌ನಾಲ್‌ಕೊಪ್ಪ ಗ್ರಾಮ ಜೂನ್ – 2015**

**2.2.15**. ಕೇಂದ್ರ ಜಲ ಆಯೋಗವು ನಿರ್ದಿಷ್ಟಪಡಿಸಿರುವಂತೆ, ಭಾರೀ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಂದ ಮುಳುಗಡೆಗೊಳ್ಳುವ ಜಮೀನು ಹಾಗೂ ನಿರ್ಮಾಣಗಳ ಸ್ವಾಧೀನಪಡಿಸಿಕೊಳ್ಳುವಿಕೆಯ ಪ್ರಮಾಣಕಗಳು, ನಿರ್ಮಾಣಗಳನ್ನು ಅವುಗಳ ಭೂಮಿಯ ಜೊತೆಯಲ್ಲಿ ನಿರೂಪಿತ ಸರಾಸರಿ ನೀರಿನ ಮಟ್ಟದವರೆಗೂ[73] ಹಾಗೂ ಅದರ ಜೊತೆಗೆ ಅಲೆಯ ಎತ್ತರ ಹಾಗೂ ಸರಾಸರಿ ನೀರಿನ ಮಟ್ಟದಿಂದ ಒಂದು ಅಡಿ ಲಂಬ ಅಥವಾ 300 ಅಡಿ ಅಡ್ಡ (100 ಮೀಟರುಗಳು), ಇವುಗಳಲ್ಲಿ ಯಾವುದು ಕಡಿಮೆಯೋ, ಅಲ್ಲಿಯವರೆಗೆ ಸ್ವಾಧೀನಪಡಿಸಿಕೊಳ್ಳತಕ್ಕದ್ದು ಎಂಬುದಾಗಿ ತಿಳಿಸಿವೆ. ನಾರಾಯಣಪುರ ಅಣೆಕಟ್ಟಿನ ಸರಾಸರಿ ನೀರಿನ ಮಟ್ಟದಿಂದ 45 ಮೀಟರುಗಳು ಹಾಗೂ 80 ಮೀಟರುಗಳ ನಡುವಿನ ಅಂತರದಲ್ಲಿದ್ದ 14 ಗ್ರಾಮಗಳು[74] ಕೇಂದ್ರ ಜಲ ಆಯೋಗವು ನಿರ್ದಿಷ್ಟಪಡಿಸಿದ್ದ ಮಾನದಂಡಗಳನ್ನು ಪೂರೈಸಿದ್ದವು. ಈ ಗ್ರಾಮಗಳು ಪುನರ್ವಸತಿಯ ಪ್ರಮಾಣಕಗಳ ಒಳಗೆ ಬರುತ್ತಿದ್ದವು ಎಂಬ ವಾಸ್ತವಾಂಶದ ಹೊರತಾಗಿಯೂ, ಸರ್ಕಾರವು ನಾರಾಯಣಪುರ ಅಣೆಕಟ್ಟಿನಲ್ಲಿ ನೀರನ್ನು ಸಂಗ್ರಹಿಸುವ (1982) ಮೊದಲು ಅವುಗಳನ್ನು ಪುನರ್ವಸತಿಯ ವ್ಯಾಪ್ತಿಯೊಳಕ್ಕೆ ತರಲಿಲ್ಲ. ಕೆಸರಪೆಂಟಿ ಹಾಗೂ ಬಿಸ್ನಾಳಕೊಪ್ಪದ ಗ್ರಾಮಸ್ಥರು ಈ ಗ್ರಾಮಗಳು ಸರಾಸರಿ ನೀರಿನ ಮಟ್ಟಕ್ಕಿಂತ ಕಡಿಮೆ ಮಟ್ಟದಲ್ಲಿ ಇದ್ದವಾದ್ದರಿಂದ ಹಾಗೂ ಬಿಡುಗಡೆಗೊಳಿಸಲಾದ ನೀರಿನಿಂದ ಮುಳುಗಡೆ ಹೊಂದಿದ್ದವಾದ್ದರಿಂದ ತಮ್ಮ ಗ್ರಾಮಗಳನ್ನು ತೊರೆದು ಹೋದರು. ಈ ಗ್ರಾಮಗಳು ಆಗಸ್ಟ್ 2005ರಲ್ಲಿ ಅಣೆಕಟ್ಟಿನಿಂದ ಹೊರಬಿಡಲಾದ ಪ್ರವಾಹದ ನೀರಿನಿಂದ ಮುಳುಗಿಹೋದನಂತರ ಹಾಗೂ ತೊಂದರೆಗೆ ಈಡಾದ ಜನತೆಯ ಕೋರಿಕೆಯ ನಂತರ ಪುನರ್ವಸತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು. ಸರ್ಕಾರವು ಮೂರು ಗ್ರಾಮಗಳ ಪುನರ್ವಸತಿಗಾಗಿ ಜನವರಿ 2007ರಲ್ಲಿ ಹಾಗೂ 11 ಗ್ರಾಮಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾಮಗಾರಿಗಳಿಗಾಗಿ ಸೆಪ್ಟಂಬರ್ 2009ರಲ್ಲಿ ಆದೇಶಗಳನ್ನು ನೀಡಿತು.

ಆಡಳಿತಾತ್ಮಕ ಕಾರಣಗಳಿಂದ ಈ ಗ್ರಾಮಗಳಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015).

---

[73] ಒಂದು ಗಮನಾರ್ಹ ಕಾಲಾವಧಿಯಲ್ಲಿ ಸಮಾನ ಮಧ್ಯಂತರಗಳಲ್ಲಿ (ಸಾಮಾನ್ಯವಾಗಿ ಗಂಟೆಗಳಲ್ಲಿ) ನಿರ್ಧಾರಣೆ ಮಾಡಲಾಗುವ ನೀರಿನ ಮೇಲ್ಮೈನ ಸರಾಸರಿ ಎತ್ತರ.

[74] ಕಟಗೂರು, ತುರಡ್ಗಿ, ಬೊಮ್ಮನಗಿ, ಕೆಂಗಲ್‌ಕಡಪಟ್ಟಿ, ಬಿಸ್ನಾಳ್, ಬಿಸ್ನಾಳ್‌ಕೊಪ್ಪ, ಇದ್ದಲ್ಗಿ, ಕಮದತ್ತ, ಅಡಿಯಾಲ, ಯೆಮ್ಮೆಟಿ, ಅನೂಪ್‌ಕಟ್ಟಿ, ಕೇಸರ್‌ಪೆಂಟಿ, ಕಜ್ಗಲ್, ವರಗೊಡ್ಡಿನ್ನಿ.

ಸರ್ಕಾರವು, ಈ ಗ್ರಾಮಗಳು ಸ್ವಾಧೀನಪಡಿಸಿಕೊಳ್ಳುವಿಕೆಯ ಪ್ರಮಾಣಕಗಳನ್ನು ತೃಪ್ತಿಪಡಿಸಿದ್ದವಾದರೂ, ನಾರಾಯಣಪುರ ಅಣೆಕಟ್ಟಿನಲ್ಲಿ ನೀರನ್ನು ಸಂಗ್ರಹಿಸುವ ಮೊದಲು ಈ ಗ್ರಾಮಗಳನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ವ್ಯಾಪ್ತಿಯ ಒಳಗೆ ತರುವಲ್ಲಿ ವಿಫಲಗೊಂಡಿತು. ಬದಲಾಗಿ ಆ ಗ್ರಾಮಗಳು ಪ್ರವಾಹದಿಂದ ತೊಂದರೆಗೀಡಾಗುವವರೆಗೂ ಕಾಯಲಾಯಿತು. ಈ ಗ್ರಾಮಗಳನ್ನು ಸೇರಿಸಲು ತೆಗೆದುಕೊಳ್ಳಲಾದ ವಿಳಂಬಿತ ಕ್ರಮಗಳ ನಂತರವೂ ಸರ್ಕಾರವು, ಒಂದು ನಿರ್ದಿಷ್ಟ ಕಾಲಮಿತಿಯ ಒಳಗೆ ಸಂಪೂರ್ಣ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿ ವಿಫಲಗೊಂಡಿತು, ಅದನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.

***ಪುನರ್ವಸತಿ ಕೇಂದ್ರಗಳಿಗಾಗಿ ಕಡಿಮೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದುದು ಹಾಗೂ ಪ್ರಯೋಜನಗಳನ್ನು ವಿತರಿಸದಿದ್ದುದು***

**2.2.16**. 14 ಗ್ರಾಮಗಳಲ್ಲಿ 4,274 ಪಿಡಿಎಫ್‌ಗಳಿದ್ದರು. ಕಾರ್ಯಗತಗೊಳಿಸುವಲ್ಲಿನ ಪ್ರಗತಿಯು ಬಹಳ ನಿಕೃಷ್ಟಮಟ್ಟದಲ್ಲಿತ್ತು. ಬೊಮ್ಮನಗಿ, ಕಟಗೂರು ಹಾಗೂ ತುರಡ್ಗಿ, ಈ ಮೂರು ಗ್ರಾಮಗಳಿಗೆ ಸಂಬಂಧಿಸಿದಂತೆ, ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವ ಸಲುವಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯು ಸಮರ್ಪಕವಾಗಿರಲಿಲ್ಲ, ಇದು ಪುನರ್ವಸತಿ ಕೇಂದ್ರಗಳ ಸ್ಥಾಪನೆಯು ವಿಳಂಬಗೊಳ್ಳುವಲ್ಲಿ ಪರಿಣಮಿಸಿತು. ಈ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳಲಾಗಿದ್ದ ಮಾನದಂಡಗಳ ಪ್ರಕಾರ, ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸುವುದಕ್ಕಾಗಿ, 217.75 ಎಕರೆಗಳಷ್ಟು[75] ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಿತ್ತು. ಇದಕ್ಕೆ ಪ್ರತಿಯಾಗಿ ಕೇವಲ 95.35 ಎಕರೆಗಳನ್ನು[76] ಮಾತ್ರ ಸ್ವಾಧೀನಪಡಿಸಿಕೊಳ್ಳಲಾಯಿತು. ಸ್ವಾಧೀನಪಡಿಸಿಕೊಂಡಿದ್ದ ಭೂಮಿಯು ಸಾಕಷ್ಟಿಲ್ಲದ ಕಾರಣ ಪಿಡಿಎಫ್‌ಗಳು ಹಂಚಿಕೆ ಪತ್ರಗಳನ್ನು ಮತ್ತು ಪುನರ್ವಸತಿ ಕೇಂದ್ರಗಳ ರಚನೆಯನ್ನು ಒಪ್ಪಲಿಲ್ಲ. ಈ ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತಸೌಕರ್ಯ ಕಾಮಗಾರಿಗಳನ್ನು ಸೆಪ್ಟಂಬರ್ 2010ರಲ್ಲಿ ಹಾಗೂ ಆಗಸ್ಟ್ 2013ರಲ್ಲಿ ವಿಳಂಬವಾಗಿ ಕೈಗೆತ್ತಿಕೊಳ್ಳಲಾಯಿತು. ಕಟಗೂರು ಹಾಗೂ ತುರಡ್ಗಿಗೆ ಸಂಬಂಧಿಸಿದ, ಕುಡಿಯುವ ನೀರಿನ ಅನುಕೂಲತೆಗಳಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಫೆಬ್ರವರಿ 2016ರಲ್ಲಿಯಷ್ಟೇ ಪೂರ್ಣಗೊಳಿಸುವುದನ್ನು ನಿರೀಕ್ಷಿಸಲಾಗಿದೆ.

ಪ್ರವಾಹದಿಂದ ತೊಂದರೆಗೊಳಗಾದ 11 ಗ್ರಾಮಗಳಲ್ಲಿ[77], ಆದೇಶಗಳನ್ನು ನೀಡಿದ ಎರಡು ವರ್ಷಗಳ ನಂತರ ಅಕ್ಟೋಬರ್ 2011ರಲ್ಲಿಯಷ್ಟೇ ಪ್ರಾರಂಭಗೊಂಡ ನಿರ್ಮಾಣಗಳನ್ನು (ತೊಂದರೆಗೆ ಈಡಾದ ಕುಟುಂಬಗಳಿಗೆ ಸೇರಿದ್ದ ಮನೆಗಳು ಹಾಗೂ ಇತರೆ ಕಟ್ಟಡಗಳು) ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯು ಡಿಸೆಂಬರ್ 2014ರಲ್ಲಿ ಪೂರ್ಣಗೊಂಡಿತು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಅದೇ ರೀತಿ, 12 ಗ್ರಾಮಗಳ ಪುನರ್ವಸತಿ ಕೇಂದ್ರಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯು ಡಿಸೆಂಬರ್ 2015ರಲ್ಲಿ ಪೂರ್ಣಗೊಂಡಿತು ಹಾಗೂ ಉಳಿದ ಎರಡು ಗ್ರಾಮಗಳ (ಅಧಿಯಲ್ ಹಾಗೂ ಬಿಸ್ನಲ್‌ಕೊಪ್ಪ) ಭೂ ಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿರಲಿಲ್ಲ (ಡಿಸೆಂಬರ್ 2015). ಮುಂದುವರೆದು, ಇತರೆ ಪರಿಹಾರಗಳಾದ ಭೂಮಿ ಹಾಗೂ ಮನೆ ನಿರ್ಮಾಣ ಅನುದಾನಗಳು, ವರಮಾನ ಉತ್ಪತ್ತಿ ಮಾಡುವುದಕ್ಕಾಗಿನ ಅನುದಾನಗಳು, ಇತ್ಯಾದಿಗಳನ್ನು ಈ 14 ಗ್ರಾಮಗಳಲ್ಲಿನ ಪಿಡಿಎಫ್‌ಗಳಿಗೆ ವಿತರಿಸಿರಲಿಲ್ಲ (ಡಿಸೆಂಬರ್ 2015), ತತ್ಪರಿಣಾಮವಾಗಿ, ಪಿಡಿಎಫ್‌ಗಳು ತಾತ್ಕಾಲಿಕ ಶೆಡ್ಡುಗಳಲ್ಲಿ ಜೀವಿಸುವುದನ್ನು ಮುಂದುವರೆಸಿದ್ದರು.

ತುರಡ್ಗಿ ಗ್ರಾಮದಲ್ಲಿನ 658 ನಿವೇಶನಗಳ ಪೈಕಿ 244ನ್ನು ಹಾಗೂ ಬೊಮ್ಮನಗಿ ಗ್ರಾಮದಲ್ಲಿನ 1,242 ನಿವೇಶನಗಳ ಪೈಕಿ 302ನ್ನು ಹಂಚಿಕೆ ಮಾಡಲಾಯಿತು ಹಾಗೂ ಅನೇಕ ಕುಟುಂಬಗಳು ಕಾಲ ಕಳೆದಂತೆ ಜೀವನೋಪಾಯಕ್ಕಾಗಿ ಇತರೆ ಸ್ಥಳಗಳಿಗೆ ಹೋಗಿದ್ದರು ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015). ಕಟಗೂರು ಗ್ರಾಮಕ್ಕೆ ಸಂಬಂಧಿಸಿದಂತೆ, ಹೆಚ್ಚುವರಿ ಭೂ ಸ್ವಾಧೀನ ಪ್ರಕ್ರಿಯೆಯನ್ನು

---

[75] ಬೊಮ್ಮನಗಿಗೆ 78.75 ಎಕರೆಗಳು (ಯೋಜನೆಯಿಂದ ಸ್ಥಳಾಂತರಗೊಂಡ 315 ಕುಟುಂಬಗಳು x 5 ಗುಂಟೆಗಳು x 2=3,150 ಗುಂಟೆಗಳು), ಕಟಗೂರಿಗೆ 63 ಎಕರೆಗಳು (252 x 5 ಗುಂಟೆಗಳು x 2=2,520 ಗುಂಟೆಗಳು) ತುರಡ್ಗಿಗೆ 76 ಎಕರೆಗಳು (304 x 5 ಗುಂಟೆಗಳು x 2=3,040 ಗುಂಟೆಗಳು) ಪೂರ್ವಭಾವಿ ಯೋಜನೆಯ ಪ್ರಮಾಣಕಗಳ ಪ್ರಕಾರ. (1 ಎಕರೆ = 40 ಗುಂಟೆಗಳು).

[76] ಬೊಮ್ಮನಗಿಗೆ 30 ಎಕರೆಗಳು, ಕಟಗೂರಿಗೆ 30.35 ಎಕರೆಗಳು ಹಾಗೂ ತುರಡ್ಗಿಗೆ 35 ಎಕರೆಗಳು.

[77] ಕೆಂಗಲ್‌ಕಡಪಟ್ಟಿ, ಬಿಸ್ನಾಳ್, ಬಿಸ್ನಾಳ್‌ಕೊಪ್ಪ, ಇದ್ದಲ್ಗಿ, ಕಮದತ್ತ, ಅಡಿಯಾಲ, ಯೆಮ್ಮೆಟಿ, ಅನುಪ್‌ಕಟ್ಟಿ, ಕೇಸರ್‌ಪೆಂಟಿ, ಕಜ್ಗಲ್, ವರಗೊದ್ದಿನ್ನಿ.

ಪ್ರಾರಂಭಿಸಲಾಗಿದೆ. ಪ್ರಯೋಜನಗಳನ್ನು ಕೋರುವಂತೆ, ಅರ್ಹ ಪಿಡಿಎಫ್‌ಗಳಿಗೆ ಅರಿವನ್ನು ಮೂಡಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಮುಂದುವರೆದು, 12 ಪುನರ್ವಸತಿ ಕೇಂದ್ರಗಳಿಗೆ ಭೂ ಸ್ವಾಧೀನ ಪೂರ್ಣಗೊಳಿಸಲಾಗಿದೆಯಾಗಿದ್ದು 10 ಪುನರ್ವಸತಿ ಕೇಂದ್ರಗಳನ್ನು ರಚಿಸಲಾಗಿದೆ ಹಾಗೂ ಎರಡು ಗ್ರಾಮಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಎಂಬುದಾಗಿಯೂ ತಿಳಿಸಿತು.

ಈ ರೀತಿಯಾಗಿ, ಯೋಜನೆಯಿಂದ ತೊಂದರೆಗೆ ಈಡಾದ ಜನತೆಗೆ ಒಂದು ನ್ಯಾಯಸಮ್ಮತ ಅವಧಿಯಲ್ಲಿ ಪುನರ್ವಸತಿಯನ್ನು ಕಲ್ಪಿಸುವಲ್ಲಿನ ವಿಫಲತೆಯು ತುರಡ್ಗಿ ಹಾಗೂ ಬೊಮ್ಮನಗಿ ಗ್ರಾಮಗಳ ಕೆಲವು ಪಿಡಿಎಫ್‌ಗಳು ತಮ್ಮ ಜೀವನೋಪಾಯಕ್ಕಾಗಿ ಇತರ ಸ್ಥಳಗಳಿಗೆ ಹೋಗಿದ್ದರು, ಅದು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅಡಿಯಲ್ಲಿ ಅರ್ಹವಿದ್ದ ಪ್ರಯೋಜನಗಳಿಂದ ಅವರುಗಳನ್ನು ವಂಚಿಸಿತ್ತು. 14 ಗ್ರಾಮಗಳ ಪೈಕಿ ಎರಡರಲ್ಲಿ ಭೂ ಸ್ವಾಧೀನ ಹಾಗೂ ಪುನರ್ವಸತಿ ಕೇಂದ್ರಗಳ ನಿರ್ಮಾಣ, 11 ಗ್ರಾಮಗಳಲ್ಲಿ ಭೂಮಿ ಹಾಗೂ ನಿರ್ಮಾಣ ಅನುದಾನಗಳು ಇವೇ ಮುಂತಾದ ಇತರೆ ಪ್ರಯೋಜನಗಳನ್ನು ಹಾಗೂ ಎರಡು ಗ್ರಾಮಗಳನ್ನು ಬಿಟ್ಟು ಉಳಿದ ಪಿಡಿಎಫ್‌ಗಳಿಗೆ ನಿವೇಶನಗಳ ಹಂಚಿಕೆಯನ್ನು ಇನ್ನೂ ಪ್ರಾರಂಭಿಸಿರಲಿಲ್ಲ (ಡಿಸೆಂಬರ್ 2015).

***ಸಮರ್ಪಕ ಮೂಲಭೂತಸೌಕರ್ಯಗಳನ್ನು ಒದಗಿಸುವಲ್ಲಿನ ವಿಫಲತೆ***

**2.2.17**. ಸರ್ಕಾರದ ನಿರ್ದೇಶನಗಳ ಪ್ರಕಾರ (ಜನವರಿ 1993), ಕೊಳವೆಗಳ ಮೂಲಕ ನೀರಿನ ಸರಬರಾಜು, ವಿದ್ಯುಚ್ಛಕ್ತಿ, ಆಂತರಿಕ ರಸ್ತೆಗಳು, ಶಾಲಾ ಕಟ್ಟಡ, ಶಿಕ್ಷಕರುಗಳಿಗೆ ವಸತಿ ಸೌಕರ್ಯ, ಸಾರ್ವಜನಿಕ ಆರೋಗ್ಯ ಕೇಂದ್ರ, ಸಮುದಾಯ ಭವನ, ಪೂಜಾ ಸ್ಥಳಗಳು, ಇತ್ಯಾದಿ ಮೂಲಭೂತಸೌಕರ್ಯಗಳ ಜೊತೆಯಲ್ಲಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಕಮಲದಿನ್ನಿ, ಧನ್ನೂರು ಹಾಗೂ ಕನಕನವಾಡಿ ಗ್ರಾಮಗಳಿಗೆ ಸಂಬಂಧಿಸಿದಂತೆ ಕಂಡಿಕೆಗಳು 2.2.17.1ರಿಂದ 2.2.17.3ರಲ್ಲಿ ಸ್ಪಷ್ಟಪಡಿಸಿರುವಂತೆ, ಪುನರ್ವಸತಿ ಕೇಂದ್ರಗಳನ್ನು ಈ ಮೂಲಭೂತಸೌಕರ್ಯಗಳನ್ನು ಒದಗಿಸದೆಯೇ ನಿರ್ಮಿಸಲಾಯಿತು ಎಂಬುದನ್ನು ಲೆಕ್ಕಪರಿಶೋಧನೆಯ ಪರಿಶೀಲನೆಯು ತೋರಿಸಿಕೊಟ್ಟಿತು.

**ಪುನರ್ವಸತಿ ಕೇಂದ್ರಗಳನ್ನು ಮೂಲ ಭೂತ ಸೌಕರ್ಯಗಳಿಲ್ಲದೇ ಸ್ಥಾಪಿಸಲಾಯಿತು.**



**ಕಮಲದಿನ್ನಿ ಪುನರ್ವಸತಿ ಕೇಂದ್ರ – ಜೂನ್ 2015**

**2.2.17.1.** ಕಮಲದಿನ್ನಿ ಗ್ರಾಮಕ್ಕಾಗಿ ಪುನರ್ವಸತಿ ಕೇಂದ್ರವನ್ನು 186 ನಿವೇಶನಗಳೊಂದಿಗೆ ಜನವರಿ 1988ರಲ್ಲಿ ನಿರ್ಮಿಸಲಾಯಿತು ಹಾಗೂ ಅರ್ಹವಿದ್ದ ಇತರೆ ಪ್ರಯೋಜನಗಳನ್ನು ವಿತರಿಸಲಾಯಿತು, ಆದರೆ ಪುನರ್ವಸತಿ ಕೇಂದ್ರದಲ್ಲಿ ನಿವೇಶನಗಳ ಹಂಚಿಕೆಯನ್ನು ಸೆಪ್ಟಂಬರ್ 2011ರಲ್ಲಿಯಷ್ಟೇ ಪ್ರಾರಂಭಿಸಲಾಯಿತು. ನಿವೇಶನ ಹಂಚಿಕೆ ಪತ್ರಗಳನ್ನು ನೀಡದಿದ್ದುದರಿಂದ ಪುನರ್ವಸತಿ ಕೇಂದ್ರದಲ್ಲಿ ಮನೆಗಳನ್ನು ಕಟ್ಟುವಲ್ಲಿ ವಂಚಿತರಾದ್ದರಿಂದ ಅವರುಗಳು ಷೆಡ್ಡುಗಳಲ್ಲಿ ಒತ್ತಾಯಪೂರ್ವಕವಾಗಿ ವಾಸಿಸುವಂತಾಯಿತು ಎಂದು ಗ್ರಾಮಸ್ಥರು ದೂರಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಮೂಲಭೂತಸೌಕರ್ಯಗಳು ಕೊರತೆಯಿಂದ ಕೂಡಿದ್ದುದು ಹಾಗೂ ಅವರುಗಳು ಕೋರಿದ್ದ ಪ್ರಕಾರ ಪುನರ್–ರಚನಾ ಕಾಮಗಾರಿಗಳನ್ನು ಕಾರ್ಯಗತಗೊಳಿಸದಿದ್ದುದರಿಂದ ಗ್ರಾಮಸ್ಥರು ಪುನರ್ವಸತಿ ಕೇಂದ್ರದಲ್ಲಿ ನೆಲೆಸಲು ನಿರಾಕರಿಸಿದ್ದರಿಂದ ನಿವೇಶನ ಹಂಚಿಕೆಯಲ್ಲಿ ವಿಳಂಬವಾಯಿತು. ಪುನರ್ವಸತಿ ಕೇಂದ್ರದ ಪುನರ್–ರಚನೆಯನ್ನು ತೊಂದರೆಗೆ ಈಡಾಗಿದ್ದ ಹಾಗೂ ಪಿಡಿಎಫ್‌ಗಳಿಂದ ದೂರುಗಳನ್ನು ಸ್ವೀಕರಿಸಿದನಂತರವಷ್ಟೇ ಕೈಗೆತ್ತಿಕೊಳ್ಳಲಾಯಿತು. ರಸ್ತೆಗಳು, ಚರಂಡಿಗಳು, ಅಂಗನವಾಡಿ ಕಟ್ಟಡಗಳು, ಸಾರ್ವಜನಿಕ ಶೌಚಾಲಯಗಳು, ಶಾಲೆಗಳು, ಇತ್ಯಾದಿ ಮೂಲ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಮೂಲಭೂತಸೌಕರ್ಯ ಕಾಮಗಾರಿಗಳನ್ನು 2012–13ರಲ್ಲಿಯಷ್ಟೇ ಕೈಗೆತ್ತಿಕೊಳ್ಳಲಾಯಿತು. ಇವುಗಳಲ್ಲಿ ಕೆಲವು ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿದ್ದವು (ಮಾರ್ಚ್ 2015). ಈ ಮಧ್ಯಂತರ ಅವಧಿಯಲ್ಲಿ, ಕಾಲವು ಕಳೆದಂತೆ ಮೃತಪಟ್ಟ 41 ಜನರು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅಡಿಯಲ್ಲಿನ

ಪ್ರಯೋಜನಗಳಿಂದ ವಂಚಿತರಾದರು. 186 ನಿವೇಶನಗಳ ಪೈಕಿ 67 ನಿವೇಶನಗಳನ್ನು ಮಾತ್ರ ಮಾರ್ಚ್ 2015ರವರೆಗೆ ವಿತರಿಸಲಾಯಿತು.

ಗ್ರಾಮದ ಬಹಳಷ್ಟು ಭಾಗವು ಮುಳುಗಡೆಯ ಮಿತಿಗಳಿಂದ ಹೊರಗೆ ಉಳಿದಿದ್ದರಿಂದ ಗ್ರಾಮಸ್ಥರು ಹಳೆಯ ಗ್ರಾಮದಲ್ಲಿಯೇ ವಾಸಿಸುವುದನ್ನು ಮುಂದುವರೆಸಿದ್ದರು ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015). ಯೋಜನೆಯಿಂದ ಸ್ಥಳಾಂತರಗೊಂಡಿದ್ದ 178 ಕುಟುಂಬಗಳ ಪೈಕಿ 107 ಕುಟುಂಬಗಳು ಹಂಚಿಕೆಯ ಪತ್ರಗಳನ್ನು ಸ್ವೀಕರಿಸಿದ್ದವು ಎಂಬುದಾಗಿಯೂ ತಿಳಿಸಿತು. ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಉಳಿದ ಕೆಲವು ಕುಟುಂಬಗಳು ತಮ್ಮ ಅರ್ಹತೆಯನ್ನು ಸಾಬೀತುಪಡಿಸುವಲ್ಲಿ ವಿಫಲಗೊಂಡಿದ್ದರಾದಲ್ಲಿ, ಇನ್ನು ಕೆಲವರು ಮತ್ತೆಲ್ಲಿಯೋ ನೆಲೆಸಿದ್ದರು.

ಪುನರ್ವಸತಿ ಕೇಂದ್ರವನ್ನು 1988ರಲ್ಲಿ ರಚಿಸಲಾಯಿತಾದರೂ, ಪುನರ್ವಸತಿ ಕೇಂದ್ರಗಳ ಮೂಲಭೂತಸೌಕರ್ಯಗಳ ಕಾಮಗಾರಿಗಳನ್ನು ಕೇವಲ 2012–13ರಲ್ಲಿಯಷ್ಟೇ ಕೈಗೆತ್ತಿಕೊಳ್ಳಲಾಗಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಇದು ಸರ್ಕಾರದ ವಿಫಲತೆಯನ್ನು ತೋರಿಸುತ್ತದೆ. ಪ್ರಸಕ್ತ ಇದ್ದಂತಹ ಆದೇಶಗಳ ಅನುಸಾರ ಮೂಲಭೂತಸೌಕರ್ಯಗಳನ್ನು ಸೃಷ್ಟಿಸುವುದು ಕಡ್ಡಾಯವಾಗಿತ್ತು ಹಾಗೂ ಈ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ ಪಿಡಿಎಫ್‌ಗಳು ಪುನರ್ವಸತಿ ಕೇಂದ್ರಗಳಿಗೆ ವರ್ಗಾಯಿಸಲ್ಪಟ್ಟಿರಲಿಲ್ಲ.


**ಧನ್ನೂರ್ ಪುನರ್ವಸತಿ ಕೇಂದ್ರ – ಜೂನ್ 2015**

**2.2.17.2.** ದನ್ನೂರಿನಲ್ಲಿ ಪುನರ್ವಸತಿ ಕೇಂದ್ರವನ್ನು 1993ರಲ್ಲಿ ರಚಿಸಲಾಯಿತು. ಪುನರ್ವಸತಿ ಕೇಂದ್ರದಲ್ಲಿ ನಿವೇಶನಗಳ ಹಂಚಿಕೆಯನ್ನು ಪುನರ್ವಸತಿ ಕೇಂದ್ರದ ರಚನೆಯಾದ 13 ವರ್ಷಗಳು ಕಳೆದನಂತರ ಅಂದರೆ 2006ರಲ್ಲಿ ಪ್ರಾರಂಭಿಸಲಾಯಿತು. ಮೂಲಭೂತಸೌಕರ್ಯ ಕಾಮಗಾರಿಗಳನ್ನು ಕೇವಲ 2013–14ರಲ್ಲಿ ಕೈಗೆತ್ತಿಕೊಳ್ಳಲಾಗಿತ್ತು ಹಾಗೂ ಅವುಗಳಲ್ಲಿ ಕೆಲವು ಇನ್ನೂ ಪ್ರಗತಿಯಲ್ಲಿದ್ದವು(ಮಾರ್ಚ್ 2015). ಪುನರ್ವಸತಿ ಕೇಂದ್ರದಲ್ಲಿ 462 ಪಿಡಿಎಫ್‌ಗಳ ಪೈಕಿ 338 ಕುಟುಂಬಗಳಿಗೆ ನಿವೇಶನಗಳನ್ನು ಹಂಚಲಾಗಿತ್ತು. ನಿವೇಶನಗಳ ಹಂಚಿಕೆಯನ್ನು ಪಡೆಯದಿದ್ದ ಪಿಡಿಎಫ್‌ಗಳು ಷೆಡ್ದುಗಳಲ್ಲಿ ವಾಸ ಮಾಡುವುದನ್ನು ಮುಂದುವರೆಸಿದ್ದರು. ಹಂಚಿಕೆ ಮಾಡದಿರಲು ಕಾರಣಗಳೆಂದರೆ, ಮರಣ ಸಂಭವಿಸಿದ್ದುದು (20 ಪಿಡಿಎಫ್‌ಗಳು), ಜಿಲ್ಲಾಧಿಕಾರಿಯವರ ಅಗತ್ಯ ಅನುಮತಿಯ ಅನುಪಸ್ಥಿತಿ (41 ಪಿಡಿಎಫ್‌ಗಳು), ಕೆಲವು ದಾಖಲೆಗಳ ಅನುಪಸ್ಥಿತಿ (32 ಪಿಡಿಎಫ್‌ಗಳು).

462 ನಿವೇಶನಗಳ ಪೈಕಿ 343ನ್ನು ಹಂಚಿಕೆ ಮಾಡಲಾಗಿತ್ತು ಹಾಗೂ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಉಳಿದ 119 ಕುಟುಂಬಗಳು ತಮ್ಮ ಅರ್ಹತೆಯನ್ನು (ಫೈಸಲಾತಿ ಹಂತದ ನಿಗದಿತ ದಿನಾಂಕ: ಜನವರಿ 1984) ಸಾಬೀತುಪಡಿಸುವಲ್ಲಿ ವಿಫಲಗೊಂಡಿದ್ದರು. ಪುನರ್ವಸತಿ ಅಧಿಕಾರಿಗಳ ಹಾಗೂ ಇನ್ನಿತರ ಮಟ್ಟಗಳ ಹುದ್ದೆಗಳು 2006ರಿಂದಲೂ ಅವಿರತವಾಗಿ ಖಾಲಿಯಿದ್ದುದು ಪ್ರಕ್ರಿಯೆಯನ್ನು ವಿಳಂಬಗೊಳಿಸಿತು.

2013–14ರಲ್ಲಿ ಕೈಗೆತ್ತಿಕೊಳ್ಳಲಾದ ಮೂಲಭೂತಸೌಕರ್ಯ ಕಾಮಗಾರಿಗಳು ಇನ್ನೂ ಪ್ರಗತಿಯ ಹಂತದಲ್ಲಿದ್ದವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. 30 ವರ್ಷಗಳಿಗೂ (ಜನವರಿ 1984) ಹೆಚ್ಚು ಕಾಲ ಕಳೆದನಂತರ ತಮ್ಮ ಅರ್ಹತೆಯನ್ನು ಇತರೆ ಕೆಲವು ದಾಖಲೆಗಳ ಮೂಲಕ ಸಾಬೀತುಪಡಿಸುವಂತೆ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳಿಗೆ ನಿರ್ದೇಶಿಸುವುದನ್ನು ಬಿಟ್ಟು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅಡಿಯಲ್ಲಿ ಸಾಮಾಜಿಕ ಆರ್ಥಿಕ ಸಮೀಕ್ಷೆಯನ್ನು ನಡೆಸಬೇಕಿತ್ತು. ಈ ರೀತಿಯಾಗಿ, ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಈ ಕುಟುಂಬಗಳಿಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅಡಿಯಲ್ಲಿ ಪ್ರಯೋಜನಗಳನ್ನು ನಿರಾಕರಿಸಲಾಯಿತು.

**2.2.17.3.** ಯೋಜನೆಯಿಂದ ಸ್ಥಳಾಂತರಗೊಂಡಿದ್ದ 1,024 ಕುಟುಂಬಗಳನ್ನು ಹೊಂದಿದ್ದ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕನವಾಡಿ ಗ್ರಾಮವು ಆಲಮಟ್ಟಿ ಜಲಾಶಯದಲ್ಲಿ ಜಲಾಶಯ ಮಟ್ಟದವರೆಗೆ ನೀರನ್ನು ಸಂಗ್ರಹಿಸಿದಾಗ, ಜಲಾಶಯ ಮಟ್ಟ 519.60 ಮೀಟರುಗಳಿಗೆ ಮುಳುಗಡೆಯ ಅಡಿಯಲ್ಲಿ ಬಂದಿತು ಹಾಗೂ ನೀರನ್ನು ಮೇಲೆ ತಿಳಿಸಲಾದ ಜಲಾಶಯ ಮಟ್ಟದವರೆಗೆ ಸಂಗ್ರಹಿಸಿದ ಸಂದರ್ಭದಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳಿಗೆ ಪುನರ್ವಸತಿ ಸೌಕರ್ಯಗಳನ್ನು 2002–03ರಲ್ಲಿಯೇ ಒದಗಿಸಬೇಕಿತ್ತು.



ಕನಕವಾಡಿ ಪುನರ್ವಸತಿ ಕೇಂದ್ರ–ಜೂನ್ 2015

ಪ್ರಾರಂಭಿಕವಾಗಿ ಸರ್ಕಾರವು, ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳಿಗೆ ನಿವೇಶನಗಳನ್ನು ಒದಗಿಸುವುದಕ್ಕಾಗಿ 129 ಎಕರೆಗಳು ಮತ್ತು 6 ಗುಂಟೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಭೂ ಸ್ವಾಧೀನ ಅಧಿನಿಯಮದ ಪರಿಚ್ಛೇದ 4(1)/6(1)ರ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿತು (ನವೆಂಬರ್ 1995/ಜುಲೈ 1996). ಅದಕ್ಕೆ ಪ್ರತಿಯಾಗಿ, ಭೂ ಮಾಲೀಕರು ಆಕ್ಷೇಪಣೆಗಳನ್ನು ಎತ್ತಿದ ಕಾರಣ ಹಾಗೂ ತದನಂತರದಲ್ಲಿ ನ್ಯಾಯಾಲಯಗಳಲ್ಲಿ ಮನವಿಗಳನ್ನು ಸಲ್ಲಿಸಿದ್ದು ಹಾಗೂ ಸರ್ಕಾರವು ಭೂ ಸ್ವಾಧೀನದ ಅಧಿಸೂಚನೆಯನ್ನು ಹಿಂಪಡೆದ ಕಾರಣ, ವಿಶೇಷ ಭೂ ಸ್ವಾಧೀನ ಅಧಿಕಾರಿಯವರು ಕೇವಲ 85 ಎಕರೆಗಳು ಹಾಗೂ 14 ಗುಂಟೆಗಳನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಯಿತು (ಆಗಸ್ಟ್ 2000). ಭೂಮಿಯ ಒಂದು ಭಾಗವಾಗಿ (28.06 ಎಕರೆಗಳು) ಸ್ವಾಧೀನಪಡಿಸಿಕೊಳ್ಳಬೇಕಿದ್ದ ಭೂಮಿಯು ವಿವಾದದ ಅಡಿಯಲ್ಲಿ ಇದ್ದುದರಿಂದ ಮುಂದಿನ ಸ್ವಾಧೀನವನ್ನು ಮಾಡಿಕೊಳ್ಳಲಿಲ್ಲ (ಆಗಸ್ಟ್ 2015).

ಸಮರ್ಪಕ ವಿಸ್ತೀರ್ಣದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವವರೆಗೂ ಪುನರ್ವಸತಿ ಕೇಂದ್ರದಲ್ಲಿ ಹಂಚಿಕೆ ಪತ್ರಗಳನ್ನು ಸ್ವೀಕರಿಸಲು ಗ್ರಾಮಸ್ಥರು ನಿರಾಕರಿಸಿದರು (ಮೇ 2001). ಪುನರ್ವಸತಿ ಕೇಂದ್ರದಲ್ಲಿ ಯಾವುದೇ ಮೂಲಭೂತಸೌಕರ್ಯಗಳನ್ನು ಸೃಷ್ಟಿಸಲಿಲ್ಲ (ಆಗಸ್ಟ್ 2015) ಹಾಗೂ ಪುನರ್ವಸತಿ ಕೇಂದ್ರವನ್ನು ರಚಿಸಲಾಗಿದ್ದ ಭೂಮಿಯು ಕುರುಚಲು ಗಿಡಗಳಿಂದ ವ್ಯಾಪಿಸಿತ್ತು.



ಕನಕವಾಡಿ ಪುನರ್ವಸತಿ ಕೇಂದ್ರ – ಜೂನ್ 2015

ಸರ್ಕಾರವು ಗ್ರಾಮಸ್ಥರಿಗೆ ₹ 1.95 ಕೋಟಿ ಮೊತ್ತದಷ್ಟು ಪರಿಹಾರವನ್ನು ಪಾವತಿಸಿತಾದರೂ (ಡಿಸೆಂಬರ್ 2000), ಪುನರ್ವಸತಿ ಕಾರ್ಯವು ಯಶಸ್ವಿಯಾಗಿಲ್ಲ ಹಾಗೂ ಪುನರ್ವಸತಿ ಕೇಂದ್ರದಲ್ಲಿ ಮೂಲಭೂತಸೌಕರ್ಯಗಳನ್ನು ಸೃಷ್ಟಿಸಿರಲಿಲ್ಲವಾದ್ದರಿಂದ, ಜನತೆಯು ವಾಸಿಸಲು ಯೋಗ್ಯವಲ್ಲದ ಸ್ಥಿತಿಯಲ್ಲಿ ಜೀವಿಸುವುದನ್ನು ಮುಂದುವರೆಸಿದ್ದರು.

ಪುನರ್ವಸತಿ ಕೇಂದ್ರವು ಇದೀಗ ಮೂಲಭೂತಸೌಕರ್ಯಗಳು ಹಾಗೂ ನಾಗರಿಕ ಅನುಕೂಲತೆಗಳಿಂದ ಸಜ್ಜುಗೊಂಡಿದೆ. ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣವನ್ನು ವಿಲೇವಾರಿ ಮಾಡಿಸುವುದನ್ನು ತ್ವರಿತಗೊಳಿಸುವುದಕ್ಕಾಗಿ ಹಾಗೂ ಭೂಮಿಯ ಉಳಿದ ಭಾಗವನ್ನು (28.06 ಎಕರೆಗಳು) ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015).

ಕುಡಿಯುವ ನೀರಿನ ಅನುಕೂಲತೆ, ಶಾಲೆ, ಆರೋಗ್ಯ ಕೇಂದ್ರ, ಶಿಕ್ಷಕರಿಗೆ ವಸತಿ ಸೌಕರ್ಯ, ಧೋಬಿ ಘಾಟು, ಸಾರ್ವಜನಿಕ ಶೌಚಾಲಯಗಳು, ಇತ್ಯಾದಿ ಅನುಕೂಲತೆಗಳನ್ನು ಪುನರ್ವಸತಿ ಕೇಂದ್ರದಲ್ಲಿ ಒದಗಿಸಿಲ್ಲವಾದ್ದರಿಂದ ಪುನರ್ವಸತಿ ಕೇಂದ್ರವು ಮೂಲ ಸೌಕರ್ಯಗಳಿಂದ ಪೂರ್ಣಗೊಂಡಿದೆ ಎಂಬುದಾಗಿ ನೀಡಲಾಗಿರುವ ಉತ್ತರವು ಒಪ್ಪುವಂತಿಲ್ಲ. ಮುಂದುವರೆದು, ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳಿಗೆ ನಿವೇಶನಗಳನ್ನು ಒದಗಿಸುವುದಕ್ಕಾಗಿ, ಭೂಮಿಯ ಒಂದು ಭಾಗವನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.

***ಬಾಗಲಕೋಟೆ ಪಟ್ಟಣದಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು***

**2.2.18**. ಬಾಗಲಕೋಟೆ ಪಟ್ಟಣದಲ್ಲಿನ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳಿಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಪೂರ್ವಭಾವಿಯಾಗಿ ಯೋಜಿಸುವುದು, ಅಭಿವೃದ್ಧಿಪಡಿಸುವುದು ಹಾಗೂ ಅದರ ನಿರ್ವಹಣೆಗಾಗಿ, ಸರ್ಕಾರವು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಿತು. ಸರ್ಕಾರವು, ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳಿಗೆ ನಿವೇಶನಗಳನ್ನು ಹಂಚುವ ಸಲುವಾಗಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1993ನ್ನು ರೂಪಿಸಿತು. ಆಲಮಟ್ಟಿ ಅಣೆಕಟ್ಟಿನ ಜಲಾಶಯ ಮಟ್ಟ 521 ಮೀಟರುಗಳವರೆಗಿನ ಬಾಗಲಕೋಟೆ ಪಟ್ಟಣದಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳ ಪುನರ್ವಸತಿ ಕಾರ್ಯಗಳನ್ನು 2001–02ರಲ್ಲಿ ಪೂರ್ಣಗೊಳಿಸಲಾಗಿತ್ತು. ಜಲಾಶಯ ಮಟ್ಟ 521 ಮೀಟರುಗಳು ಹಾಗೂ ಜಲಾಶಯ ಮಟ್ಟ 523 ಮೀಟರುಗಳಿಗೆ ಪಿಡಿಎಫ್‌ಗಳ ಪುನರ್ವಸತಿಗೆ ಸಂಬಂಧಿತ ಹಾಗೂ ಜಲಾಶಯ ಮಟ್ಟ 523 ಮೀಟರುಗಳು ಹಾಗೂ ಜಲಾಶಯ ಮಟ್ಟ 525 ಮೀಟರುಗಳಿಗೆ 2010–15ರಲ್ಲಿ ಪ್ರಗತಿಯಲ್ಲಿದ್ದ ಭೂ ಸ್ವಾಧೀನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಲಾಗಿ ಈ ಕೆಳಗಿನ (ಕಂಡಿಕೆ 2.2.18.1 ಮತ್ತು 2.2.18.2) ಅಂಶಗಳನ್ನು ತೋರಿಸಿಕೊಟ್ಟಿತು:

***ನಿಕೃಷ್ಟಮಟ್ಟದಲ್ಲಿ ಕಾರ್ಯಗತಗೊಳಿಸಿದ್ದುದು***

**2.2.18.1**. ಬಾಗಲಕೋಟೆ ಪಟ್ಟಣದಲ್ಲಿ ಯೋಜನೆಯಿಂದ ತೊಂದರೆಗೆ ಈಡಾಗಿದ್ದ (ಜಲಾಶಯ ಮಟ್ಟ 521 ಮೀಟರುಗಳು ಹಾಗೂ ಜಲಾಶಯ ಮಟ್ಟ 523 ಮೀಟರುಗಳು ನಡುವೆ ಜೀವಿಸುತ್ತಿರುವವರು) ಜನತೆಯ (6,329 ಪಿಡಿಎಫ್‌ಗಳು) ಪ್ರತಿಭಟನೆ ಹಾಗೂ ಅವರುಗಳು ನೀಡಿದ ದೂರುಗಳ ಆಧಾರದ ಮೇರೆಗೆ, ಆಲಮಟ್ಟಿ ಜಲಾಶಯದ ಮಟ್ಟ 519.60 ಮೀಟರ್‌ನ ಹಿನ್ನೀರಿನ ಕಾರಣ ಅವರುಗಳು ಗುರುತರವಾದಂತಹ ಅನಾರೋಗ್ಯಕರ ಪರಿಸ್ಥಿತಿಗೆ ಈಡಾಗಿದ್ದರಿಂದ ಸರ್ಕಾರವು ಪುನರ್ವಸತಿ ಆದೇಶವನ್ನು ಜಾರಿಗೊಳಿಸಿತು (ನವೆಂಬರ್ 2002).

ಸರ್ಕಾರದಿಂದ ನವಂಬರ್ 2002ರಲ್ಲಿ ನಿರ್ದೇಶನಗಳನ್ನು ಸ್ವೀಕರಿಸಿದ್ದಾಗ್ಯೂ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ಪಟ್ಟಣದಲ್ಲಿನ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲು ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಬಗ್ಗೆ ವಿಷಯವನ್ನು ಜೂನ್ 2010ರಲ್ಲಿಯಷ್ಟೇ ಕಂಪನಿಯ ನಿರ್ದೇಶಕರುಗಳ ಮಂಡಳಿಯ ಗಮನಕ್ಕೆ ತರಲಾಯಿತು. ಮಂಡಳಿಯು ಕಟ್ಟಡ ಸ್ವಾಧೀನಪಡಿಸಿಕೊಳ್ಳಲು ಹಾಗೂ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಈ ಕುಟುಂಬಗಳ ಪುನರ್ವಸತಿಗಾಗಿ ಮೂಲಭೂತಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುಮೋದನೆಯನ್ನು ನೀಡಿತು (ಜೂನ್ 2010). ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು 3,723 ಕಟ್ಟಡಗಳ ಸ್ವಾಧೀನಪಡಿಸಿಕೊಳ್ಳುವಿಕೆಯನ್ನು 2014–15ರಲ್ಲಿಯೇ ಪೂರ್ಣಗೊಳಿಸಿತ್ತಾದರೂ, ಪಿಡಿಎಫ್‌ಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಗಳು ಇನ್ನೂ ಪ್ರಾರಂಭಗೊಳ್ಳಬೇಕಾಗಿದೆ (ಡಿಸೆಂಬರ್ 2015). ಒಳಚರಂಡಿ, ರಸ್ತೆಗಳ ನಿರ್ಮಾಣ, ವಿದ್ಯುದೀಕರಣಕ್ಕಾಗಿ ಕಾಮಗಾರಿಗಳನ್ನು 2013–14ರಲ್ಲಿಯಷ್ಟೇ ಕೈಗೆತ್ತಿಕೊಳ್ಳಲಾಗಿತ್ತು ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು 2014–15ರಲ್ಲಿ ಪ್ರಾರಂಭಿಸಲಾಗಿತ್ತು.

ಈ ರೀತಿಯಾಗಿ, ವಿವಿಧ ಹಂತಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವಲ್ಲಿನ ವಿಪರೀತವಾದ ವಿಳಂಬವು ಜನತೆಯು ಒಂದು ಕಾಲಮಿತಿಯೊಳಗೆ ಯಾವುದೇ ಪರಿಹಾರವನ್ನೂ ಪಡೆಯದೆ, ಅನಾರೋಗ್ಯಕರ ಪರಿಸ್ಥಿತಿಯಲ್ಲಿ 2002ರಿಂದಲೂ ವಾಸಿಸುವುದಕ್ಕೆ ಕಾರಣವಾಗಿತ್ತು 13 ವರ್ಷಗಳೇ ಕಳೆದರೂ ಜನತೆಯನ್ನು ಪುನರ್ವಸತಿ ಕೇಂದ್ರಗಳಿಗೆ ಇನ್ನೂ ಸ್ಥಳಾಂತರಿಸಬೇಕಾಗಿತ್ತು.

519.60 ಮೀಟರುಗಳ ಮಟ್ಟದಿಂದ ಮುಂದಕ್ಕೆ ಹೋಗಲು ರಾಜ್ಯಕ್ಕೆ ಅನುಮತಿಯಿಲ್ಲ ಹಾಗೂ ಈ ಮಟ್ಟದಿಂದ ಮುಂದಕ್ಕೆ ಯಾವುದಾದರೂ ಕ್ರಮವನ್ನು ತೆಗೆದುಕೊಳ್ಳಬೇಕಿದ್ದಲ್ಲಿ ಯಾವುದೇ ಕಾನೂನಾತ್ಮಕ ಬದ್ಧತೆಯೂ ಇಲ್ಲದೆ ಮಾಡಲಾದ ಮುಂಗಡ ಕ್ರಮ ಎಂಬುದಾಗಿ ಅರ್ಥೈಸಲಾಗುವುದು, ಆದ್ದರಿಂದ 2002ರಲ್ಲಿ ತೆಗೆದುಕೊಳ್ಳಲಾದ ನಿರ್ಣಯವನ್ನು ಕಾರ್ಯಗತಗೊಳಿಸಲಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015). ತದನಂತರ, ನಿವಾಸಿಗಳ ಒತ್ತಡದ ಕಾರಣ, ಜೂನ್ 2010ರಲ್ಲಿ ಜಲಾಶಯ ಮಟ್ಟ 521ರಿಂದ ಜಲಾಶಯ ಮಟ್ಟ 523ರವರೆಗಿನ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲು ಒಂದು ನಿರ್ಣಯವನ್ನು ಕೈಗೊಳ್ಳಲಾಯಿತು.

ಉತ್ತರವು ಒಪ್ಪುವಂತಿಲ್ಲ, ಏಕೆಂದರೆ ಆಲಮಟ್ಟಿ ಜಲಾಶಯದ 519.60 ಮೀಟರುಗಳ ಜಲಾಶಯ ಮಟ್ಟದಲ್ಲಿ ಕುಟುಂಬಗಳು ಸಂಕಷ್ಟವನ್ನು ಅನುಭವಿಸಿದ್ದರು. ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಜಲಾಶಯ ಮಟ್ಟ 523 ಮೀಟರ್‌ಗಳವರೆಗಿನ ಕುಟುಂಬಗಳಿಗೆ ಕೈಗೆತ್ತಿಕೊಳ್ಳಬೇಕು ಎಂದು ನವೆಂಬರ್ 2002ರಲ್ಲಿ ಸರ್ಕಾರವು ಆದೇಶ ನೀಡಿದ್ದರೂ ಮತ್ತು ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬಗಳನ್ನು ಸ್ಥಳಾಂತರಿಸಲು ನಿರ್ದೇಶಕರ ಮಂಡಳಿಯು ಜೂನ್ 2010ರಲ್ಲಿ ಅಂತಿಮ ನಿರ್ಧಾರ ಕೈಗೊಂಡಿದ್ದರೂ, ಅದು ಈವರೆಗೂ ಪೂರ್ಣವಾಗಿಲ್ಲ (ಡಿಸೆಂಬರ್ 2015).

**ಶಿಫಾರಸ್ಸು ಸಂಖ್ಯೆ. 2: ಭೂಮಿ ಮತ್ತು ಕಟ್ಟಡಗಳನ್ನು ಸ್ವಾಧಿನಪಡಿಸಿಕೊಳ್ಳಲು ಕೇಂದ್ರ ಜಲ ಆಯೋಗದ ಪ್ರಮಾಣಕಗಳಿಗೆ ಬದ್ಧವಾಗಿರಬೇಕು ಮತ್ತು ಪುನರ್ವಸತಿ ಕೇಂದ್ರಗಳನ್ನು ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳೊಂದಿಗೆ ಪ್ರಮಾಣಕಗಳಿಗೆ ಅನುಗುಣವಾಗಿ ಸಮಯೋಚಿತವಾಗಿ ನಿರ್ಮಾಣ ಮಾಡಬೇಕು.**

***ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲದ ಕಾರ್ಯಚಟುವಟಿಕೆಗಳಿಗೆ ಭೂಮಿಯನ್ನು ಹಂಚಿಕೆ ಮಾಡಿದ್ದುದು***

**ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಾಗಿ ಸ್ವಾಧೀನಪಡಿಸಿಕೊಂಡ 1168 ಎಕರೆ ಭೂಮಿಯನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯೇತರ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಯಿತು. ಇದರಿಂದಾಗಿ ಅವಶ್ಯಕತೆಯನ್ನು ಈಡೇರಿಸುವುದಕ್ಕಾಗಿ ತದನಂತರದಲ್ಲಿ ಹೆಚ್ಚುವರಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಯಿತು.**

**2.2.18.2.** ವಿಶ್ವ ಬ್ಯಾಂಕಿನ ಶಿಫಾರಸುಗಳ ಆಧಾರದ ಮೇರೆಗೆ, ಸರ್ಕಾರವು ಬಾಗಲಕೋಟೆ ಪಟ್ಟಣದಲ್ಲಿ ಯೋಜನೆಯಿಂದ ತೊಂದರೆಗೆ ಈಡಾದ ಜನತೆಗೆ ನೀಡಬೇಕಾದ ಪ್ರಯೋಜನಗಳನ್ನು ನಿರ್ದಿಷ್ಟಪಡಿಸಿ ಒಂದು ಆದೇಶವನ್ನು ನೀಡಿತು (ಜೂನ್ 1991). ತದನಂತರ, ಸರ್ಕಾರವು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1993 ಎಂಬುದಾಗಿ ಕರೆಯಲ್ಪಡುವ ಹಂಚಿಕೆ ನಿಯಮಗಳ ಅಧಿಸೂಚನೆ ಹೊರಡಿಸಿತು (ಮೇ 1994). ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಹಂಚಿಕೆಯು ಈ ನಿಯಮಗಳಿಂದ ನಿಯಂತ್ರಿಸಲ್ಪಡುತ್ತವೆ. ಈ ಹಂಚಿಕೆ ನಿಯಮಗಳು ಗ್ರಾಮಗಳ ಪುನರ್ವಸತಿಗಾಗಿ ರೂಪಿಸಲಾಗಿದ್ದವುಗಳಿಗಿಂತ ವಿಭಿನ್ನವಾಗಿವೆ.

ಸರ್ಕಾರದ ಅನುಮೋದನೆಯೊಂದಿಗೆ (ಅಕ್ಟೋಬರ್ 1985), ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ಬಾಗಲಕೋಟೆ ಪಟ್ಟಣದ ಸ್ಥಳಾಂತರಕ್ಕಾಗಿ 4,544 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು (1986–87). ಇದರ ಪೈಕಿ, 3,230 ಎಕರೆಗಳನ್ನು ಜಲಾಶಯ ಮಟ್ಟ 523 ಮೀಟರುಗಳವರೆಗೆ ಸಂಕಷ್ಟಕ್ಕೆ ಈಡಾಗಿದ್ದ ಪಿಡಿಎಫ್‌ಗಳ ಪುನರ್ವಸತಿಗಾಗಿ ಉಪಯೋಗಿಸಿಕೊಳ್ಳಲಾಯಿತು ಹಾಗೂ 1,168 ಎಕರೆಗಳನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲದ ಕಾರ್ಯಚಟುವಟಿಕೆಗಳು, ಅಂದರೆ ತೋಟಗಾರಿಕೆ ವಿಶ್ವವಿದ್ಯಾನಿಲಯ, ಆಹಾರ ಆವರಣ (ಫುಡ್ ಪಾರ್ಕ್), ಇತ್ಯಾದಿಗಳಿಗಾಗಿ ಒದಗಿಸಲಾಯಿತು. ಮುಂದುವರೆದು, ಬಾಗಲಕೋಟೆ ಪಟ್ಟಣದಲ್ಲಿನ ಯೋಜನೆಯಿಂದ ತೊಂದರೆಗೆ ಈಡಾದ ಜನತೆಗೆ ಹೆಚ್ಚುವರಿ ಪ್ರಯೋಜನಗಳನ್ನು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1993 ಅನುವು ಮಾಡಿದೆ, ಅವು, ಇನ್ನಿತರವುಗಳ ಜೊತೆಗೆ, ಪಿಡಿಎಫ್‌ಗಳ ಆಯ್ಕೆಯ ಪ್ರಕಾರ, ಅಧಿಕ ವಿಸ್ತಾರದ ನಿವೇಶನಗಳ ಹಂಚಿಕೆ[78], ಮೂಲೆ ನಿವೇಶನಗಳ ಹರಾಜು, ಯೋಜನೆಯಿಂದ ಪ್ರಭಾವಿತಗೊಂಡಿದ್ದ ಪ್ರದೇಶದಲ್ಲಿ ನಿರ್ದಿಷ್ಟ ಅವಧಿಯವರೆಗೆ ಬಾಡಿಗೆ ಮನೆಯಲ್ಲಿ ವಾಸವಿದ್ದವರಿಗೆ ನಿವೇಶನಗಳ ಹಂಚಿಕೆ, ಅತಿಥಿ ಪಿಡಿಎಫ್‌ಗಳಿಗೆ[79] ಹಾಗೂ ಅತಿಥಿ ಪಿಡಿಎಫ್‌ಗಳಲ್ಲದವರಿಗೆ ನಿವೇಶನಗಳ ಹಂಚಿಕೆ, ಇತ್ಯಾದಿಗಳನ್ನು ಒಳಗೊಂಡಿತ್ತು. ಈ ಅನುವುಗಳು ಪ್ರಾರಂಭಿಕ ಹಂತದಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯ ಬಹಳಷ್ಟು ಭಾಗವನ್ನು ಪಡೆದುಕೊಂಡುಬಿಟ್ಟಿತ್ತು ಹಾಗೂ ಪಿಡಿಎಫ್‌ಗಳಿಗೆ ಪುನರ್ವಸತಿ

[78] ಪಿಡಿಎಫ್‌ಗಳು ಉಚಿತ 72 ಚದರ ಮೀಟರ್‌ಗಳಿಗೆ ಅರ್ಹರಿದ್ದರು ಮತ್ತು ಅವರುಗಳಿಗೆ ಹೆಚ್ಚಿನ ಆಯಾಮದ ನಿವೇಶನಗಳನ್ನು, ಪಿಡಿಎಫ್‌ಗಳ ಆಯ್ಕೆಯಂತೆ, ವ್ಯತ್ಯಾಸದ ದರವನ್ನು ಪಡೆದನಂತರ ಹಂಚಲಾಯಿತು.

[79] ಅತಿಥಿ ಪಿಡಿಎಫ್ ಎಂದರೆ ಯೋಜನೆಯಿಂದ ತೊಂದರೆಗೊಳಗಾದ ಜನರ ಪುನರ್ವಸತಿಗಾಗಿ ಭೂಮಿಯನ್ನು ಕಳೆದುಕೊಳ್ಳುವವರು.

ಕಲ್ಪಿಸುವಲ್ಲಿ ವಿಳಂಬವಾಯಿತು. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲದ ಕಾರ್ಯಚಟುವಟಿಕೆಗಳಿಗೆ ಬಳಸಿಕೊಂಡನಂತರ 4,544 ಎಕರೆಗಳಷ್ಟು ಭೂಮಿಯ ಪೈಕಿ ಕೇವಲ 146 ಎಕರೆಗಳು ಮಾತ್ರ ಉಳಿದಿತ್ತು.

ಬಾಗಲಕೋಟೆ ಪಟ್ಟಣದಲ್ಲಿ ಆಲಮಟ್ಟಿ ಜಲಾಶಯ ಮಟ್ಟ 523 ಮೀಟರುಗಳಿಂದ ಜಲಾಶಯ ಮಟ್ಟ 527 ಮೀಟರುಗಳವರೆಗೆ[80] ಯೋಜನೆಯಿಂದ ತೊಂದರೆಗೆ ಈಡಾಗಿದ್ದ 42,618 ಜನರಿಗೆ ಪುನರ್ವಸತಿ ಕಾರ್ಯವು ಬಾಕಿಯಿರುವುದನ್ನು ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಲು ಅಂದಾಜು 3,600 ಎಕರೆಗಳಷ್ಟು ಭೂಮಿಯ ಅಗತ್ಯತೆಯಿರುವುದನ್ನು ಸರ್ಕಾರವು ಚೆನ್ನಾಗಿ ಅರಿತಿತ್ತಾದರೂ, 1,168 ಎಕರೆಗಳಷ್ಟು ಭೂಮಿಯನ್ನು ಇತರೆ ಉದ್ದೇಶಗಳಿಗಾಗಿ ನೀಡಲಾಯಿತಾದ್ದರಿಂದ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯತೆಯುಂಟಾಯಿತು ಹಾಗೂ ತತ್ಪರಿಣಾಮವಾಗಿ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳ ಪುನರ್ವಸತಿಯು ವಿಳಂಬಗೊಳ್ಳುವಲ್ಲಿ ಪರಿಣಮಿಸಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ಜಲಾಶಯ ಮಟ್ಟ 523 ಮೀಟರುಗಳಿಂದ ಜಲಾಶಯ ಮಟ್ಟ 525 ಮೀಟರುಗಳವರೆಗಿನ ಎಲ್ಲೆಕಟ್ಟಿನಲ್ಲಿ ವಾಸಿಸುತ್ತಿದ್ದ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಕುಟುಂಬಗಳಿಗೆ ನಿವೇಶನಗಳನ್ನು ಒದಗಿಸುವುದಕ್ಕಾಗಿ 2,032.32 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಿತು (ನವಂಬರ್ 2013 ಹಾಗೂ ಜನವರಿ 2014ರ ನಡುವೆ), ಅದನ್ನು ಈವರೆಗೂ ಸ್ವಾಧೀನಪಡಿಸಿಕೊಂಡಿಲ್ಲ (ಡಿಸೆಂಬರ್ 2015). ಈ ಎಲ್ಲೆಕಟ್ಟು ಪ್ರಸಕ್ತ ಇದ್ದಂತಹ ಪರಿಮಾಣಗಳ ಪ್ರಕಾರ 544 ಎಕರೆಗಳಷ್ಟು ಭೂಮಿಯ ಅಗತ್ಯತೆಯನ್ನು ಹೊಂದಿತ್ತು. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ಪ್ರಾರಂಭಿಕವಾಗಿ ಸ್ವಾಧೀನಪಡಿಸಿಕೊಂಡಿದ್ದ 4,544 ಎಕರೆಗಳಷ್ಟು ಭೂಮಿಯ ಪೈಕಿ 146 ಎಕರೆಗಳಷ್ಟನ್ನು ಉಳಿಸಿಕೊಂಡಿತ್ತು. ಆದ್ದರಿಂದ, ಅಗತ್ಯತೆಯಿದ್ದುದು 400 ಎಕರೆಗಳು ಮಾತ್ರ ಹಾಗೂ ಇದನ್ನು ಇತರ ಉದ್ದೇಶಗಳಿಗಾಗಿ ಮಾರ್ಗಾಂತರಣ ಮಾಡಿದ್ದ 1,168 ಎಕರೆಗಳಿಂದ ನೀಡಬಹುದಾಗಿತ್ತಾದ್ದರಿಂದ 2,032.32 ಎಕರೆಗಳಿಗೆ ಹೊಸದಾಗಿ ಅಧಿಸೂಚನೆಯನ್ನು ನೀಡುವ ಅಗತ್ಯತೆಯಿರಲಿಲ್ಲ. ಹೆಚ್ಚುವರಿ ಭೂಮಿಗಾಗಿ ಮಾಡಲಾದ ಈ ಭೂ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದ್ದ ಪುನರ್ವಸತಿ ಪ್ರಕ್ರಿಯೆಯನ್ನು ವಿಳಂಬಗೊಳಿಸಿತು.

ಪಿಡಿಎಫ್‌ಗಳಲ್ಲದವರಿಗೆ ಹೊಸದಾಗಿ ರಚಿಸಲಾಗಿದ್ದ ಪುನರ್ವಸತಿ ಪಟ್ಟಣದಲ್ಲಿ ವಾಸ ಮಾಡುವಿಕೆಯನ್ನು ಪ್ರೋತ್ಸಾಹಿಸುವುದಕ್ಕಾಗಿ, ಒಂದು ಬಾರಿಯ ಕ್ರಮದಂತೆ ನಿವೇಶನವನ್ನು ಹಂಚಿಕೆ ಮಾಡಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015). ಮೂಲೆ ನಿವೇಶನಗಳನ್ನು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (ಮೂಲೆ ನಿವೇಶನಗಳ ವಿಲೇವಾರಿ) ನಿಯಮಗಳು, 2003ರ ಅನುಸಾರ ಹಂಚಿಕೆ ಮಾಡಲಾಗಿತ್ತು. ಉದ್ಯೋಗಗಳನ್ನು ಸೃಷ್ಟಿಸುವ ದೃಷ್ಟಿಯಿಂದ ಆಹಾರ ಆವರಣಕ್ಕೆ (ಫುಡ್ ಪಾರ್ಕ್), ನಿವೇಶನವನ್ನು ನೀಡಲಾಯಿತು ಹಾಗೂ ಬಾಗಲಕೋಟೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಭೂಮಿಯನ್ನು ನೀಡಲಾಯಿತು ಎಂಬುದಾಗಿಯೂ ತಿಳಿಸಿತು.

ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ತೊಂದರೆಗೆ ಈಡಾದವರ ಪುನರ್ವಸತಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತಾದ್ದರಿಂದ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಆದ್ಯತೆಯನ್ನು ನೀಡಬೇಕಿತ್ತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಯಾವುದಾದರೂ ಹೆಚ್ಚುವರಿ ಅನುವುಗಳು ಇದ್ದಲ್ಲಿ ಅವುಗಳನ್ನು ತೊಂದರೆಗೆ ಈಡಾದ ಜನತೆಗೆ ಸೂಕ್ತವಾದ ಪುನರ್ವಸತಿಯನ್ನು ಕಲ್ಪಿಸಿದನಂತರ ಮಾಡಬಹುದಾಗಿತ್ತು ಮತ್ತು ಸರ್ಕಾರವು ನಿರ್ದಿಷ್ಟ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದಿತ್ತು. ಅದರ ಬದಲಾಗಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ತನ್ನ ಮೂಲ ಸಾಮಾಜಿಕ ಹೊಣೆಗಾರಿಕೆಯನ್ನು ಈಡೇರಿಸದೆಯೇ ಮಾರ್ಗಾಂತರಣಗಳಿಗೆ ಮೊರೆ ಹೋಯಿತು. ಉದ್ಯೋಗಗಳನ್ನು ಸೃಷ್ಟಿಸುವುದಕ್ಕಾಗಿ ಆಹಾರ ಆವರಣಕ್ಕೆ (ಫುಡ್ ಪಾರ್ಕ್) ನಿವೇಶನವನ್ನು ಹಂಚಿಕೆ ಮಾಡಿದ್ದು, ಅಲ್ಲಿ ಅವುಗಳು ಇನ್ನೂ

[80] ಸಂಪೂರ್ಣ ನೀರಿನ ಮಟ್ಟ 524.25 ಮೀಟರುಗಳಿಗೆ, ಬಾಗಲಕೋಟೆ ಪಟ್ಟಣದಲ್ಲಿ ಜಲಾಶಯ ಮಟ್ಟ 527 ಮೀಟರುಗಳವರೆಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಚಟುವಟಿಕೆಗಳನ್ನು ಪ್ರಸ್ತಾಪಿಸಲಾಯಿತು.

ಪ್ರಾರಂಭಗೊಳ್ಳಬೇಕಾಗಿರುವುದರಿಂದ ಕೆಲಸವನ್ನು ಸೃಷ್ಟಿಸುವ ಯಾವುದೇ ಉದ್ದೇಶಗಳೂ ಈಡೇರಿರುವುದಿಲ್ಲ (ಡಿಸೆಂಬರ್ 2015).

**ಶಿಫಾರಸ್ಸು ಸಂಖ್ಯೆ 3: ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಚಟುವಟಿಕೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಇತರೆ ಉದ್ದೇಶಕ್ಕಾಗಿ ಬಳಸುವುದನ್ನು ತಡೆಗಟ್ಟಲು ಸರ್ಕಾರವು ಸೂಕ್ತ ಆದೇಶಗಳನ್ನು ಹೊರಡಿಸಬೇಕು.**

**ಮೇಲ್ವಿಚಾರಣೆ**

**2.2.19**. ಸರ್ಕಾರವು, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ಕಾರ್ಯಗತಗೊಳಿಸಲ್ಪಟ್ಟ ಕಾಮಗಾರಿಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದಕ್ಕಾಗಿ ಮುಖ್ಯ ಮಂತ್ರಿಯವರ ನೇತೃತ್ವದಲ್ಲಿ ಒಂದು ಉನ್ನತ ಮಟ್ಟದ ಸಮೀಕ್ಷಾ ಸಮಿತಿ ಹಾಗೂ ಬಾಗಲಕೋಟೆ ಪಟ್ಟಣವನ್ನು ಸ್ಥಳಾಂತರಿಸುವುದಕ್ಕಾಗಿ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಕ್ರಿಯಾ ಯೋಜನೆ ಸಮಿತಿ, ಈ ರೀತಿಯಾಗಿ ಎರಡು ಸಮಿತಿಗಳ ರಚನೆಗೆ ಸರ್ಕಾರವು ಅನುಮೋದನೆಯನ್ನು ನೀಡಿತು (ಏಪ್ರಿಲ್ 1985). ಮುಂದುವರೆದು, ಸಂಪೂರ್ಣ ಜಲಾಶಯ ಮಟ್ಟ 524.25 ಮೀಟರುಗಳಿಗೆ ಯೋಜನೆಯಿಂದ ತೊಂದರೆಗಳಿಗೆ ಈಡಾದ ಜನತೆಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಿಗಾಗಿ ಅದೇ ರೀತಿಯ ಸಮಿತಿಗಳನ್ನು ರಚಿಸಲು ಸರ್ಕಾರವು ಅನುಮೋದನೆಯನ್ನು ನೀಡಿತು (ಜುಲೈ 2013). ಅಲ್ಲದೇ, ಯೋಜನಾ ಮಟ್ಟದಲ್ಲಿ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರು ಹಾಗೂ ನಿಧಿ ಒದಗಿಸುವ ಪ್ರಾಧಿಕಾರವಾಗಿ ಕಂಪನಿಯು ಮೇಲ್ವಿಚಾರಣೆಗಳನ್ನು ನಡೆಸಲು ಜವಾಬ್ದಾರಿಯುತವಾಗಿದ್ದರು.

**ಕಾಮಗಾರಿಯ ಪ್ರಗತಿಯ ಪರಿಶೀಲನೆಗಾಗಿ ಸ್ಥಾಪಿತಗೊಂಡಿದ್ದ ಸಮಿತಿಯು ಬಹುತೇಕ ಸಕ್ರಿಯವಾಗಿರಲಿಲ್ಲ.**

ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಚಟುವಟಿಕೆಗಳನ್ನು ಸಮೀಕ್ಷಿಸುವ ಸಲುವಾಗಿ ರಚಿಸಲಾಗಿದ್ದ ಸಮಿತಿಗಳು (ಉನ್ನತ ಮಟ್ಟದ ಸಮೀಕ್ಷಾ ಸಮಿತಿ, ಕ್ರಿಯಾ ಯೋಜನೆ ಸಮಿತಿ) 2010 ಹಾಗೂ 2015ರ ನಡುವಿನ ಸಂಪೂರ್ಣ ಅವಧಿಯಲ್ಲಿ ಸಭೆಗಳನ್ನು ನಡೆಸಿರಲಿಲ್ಲ. ಮುಂದುವರೆದು, ಸಂಪೂರ್ಣ ಜಲಾಶಯ ಮಟ್ಟ 524.25 ಮೀಟರುಗಳಿಗೆ ಯೋಜನೆಯಿಂದ ತೊಂದರೆಗೆ ಈಡಾಗಿದ್ದ ಜನತೆಗೆ ಪುನರ್ವಸತಿಯನ್ನು ಒದಗಿಸುವುದಕ್ಕಾಗಿ ಜುಲೈ 2013ರಲ್ಲಿ ರಚಿಸಲಾಗಿದ್ದ ಕ್ರಿಯಾ ಯೋಜನೆ ಸಮಿತಿಯು ಕೇವಲ ಮೂರು ಸಲ ಸಭೆಗಳನ್ನು ನಡೆಸಿತ್ತು (ಜನವರಿ 2014, ಆಗಸ್ಟ್ 2014 ಹಾಗೂ ಡಿಸೆಂಬರ್ 2014). ಆದಾಗ್ಯೂ, ಕಂಪನಿಯ ಮಟ್ಟದಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರ ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಪ್ರಸ್ತಾವನೆಗಳನ್ನು ವಾರ್ಷಿಕ ಯೋಜನೆಗಳ ಸಮೀಕ್ಷೆಯ ಸಮಯದಲ್ಲಿ ಚರ್ಚಿಸಲಾಗಿತ್ತು ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯಗತಗೊಳಿಸುವಿಕೆಯನ್ನು ನಿಯತವಾಗಿ ಮೇಲ್ವಿಚಾರಣೆ ಮಾಡಿರಲಿಲ್ಲ.

ನಿಯತಕಾಲಿಕ ಸಭೆಗಳನ್ನು ನಡೆಸದಿದ್ದ ಫಲವಾಗಿ, ಪುನರ್ವಸತಿ ಕೇಂದ್ರಗಳಿಗೆ ಭೂಮಿಯನ್ನು ಅಸಮರ್ಪಕವಾಗಿ ಸ್ವಾಧೀನಪಡಿಸಿಕೊಂಡಿದ್ದುದು, ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವಲ್ಲಿನ ವಿಳಂಬ, ವಿವಿಧ ಮಟ್ಟಗಳಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ವಿಪರೀತವಾದ ವಿಳಂಬ, ಇತ್ಯಾದಿ ಅಡಚಣೆಗಳನ್ನು ಸರ್ಕಾರದ/ವ್ಯವಸ್ಥಾಪನೆಯ ಸೂಕ್ತ ಮಟ್ಟಗಳಲ್ಲಿ ಸಮರ್ಪಕವಾಗಿ ನಿಭಾಯಿಸಲಿಲ್ಲ. ನಾರಾಯಣಪುರ ಹಾಗೂ ಆಲಮಟ್ಟಿ ಅಣೆಕಟ್ಟುಗಳ ಅಡಿಯಲ್ಲಿ ತೊಂದರೆಗೆ ಈಡಾದ ಜನತೆಯು ನವಂಬರ್ 2002/ಜನವರಿ 2007ರಿಂದಲೂ ಈ ದಿನದವರೆಗೂ (ಆಗಸ್ಟ್ 2015) ಪುನರ್ವಸತಿಗಾಗಿ ನಿರೀಕ್ಷಿಸುತ್ತಿದ್ದಾರೆ. ಯಾವುದೇ ಮಟ್ಟದಲ್ಲಿಯೇ ಆಗಲಿ ಇರಬಹುದಾದ ಲೋಪದೋಷಗಳನ್ನು ಗುರುತಿಸುವ ಹಾಗೂ ಅವುಗಳಿಗೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ರೀತಿಯಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಕಾರ್ಯಗತಗೊಳಿಸುವಿಕೆಯನ್ನು ಪ್ರತಿ ಹಂತದಲ್ಲಿಯೂ ಮೇಲ್ವಿಚಾರಣೆ ಮಾಡುವಂತೆ ಸರ್ಕಾರವು ನಿರ್ದೇಶನಗಳನ್ನು ನೀಡಬೇಕಿತ್ತು. ನಿಯತಕಾಲಿಕ ಸಭೆಗಳು ಪುನರ್ವಸತಿಯ ಸ್ಥಿತಿಗತಿಯನ್ನು ನಿರ್ಧಾರಣೆ ಮಾಡುವಲ್ಲಿ ಸರ್ಕಾರಕ್ಕೆ ಸಹಾಯಕವಾಗುತ್ತಿದ್ದವು ಹಾಗೂ ಲೆಕ್ಕಪರಿಶೋಧನೆಯು ಗಮನಿಸಿದ ಎಲ್ಲಾ ಲೋಪದೋಷಗಳನ್ನು ಪ್ರಕ್ರಿಯೆಗಳ ಉದ್ಭವಾವಸ್ಥೆಯಲ್ಲಿಯೇ ಸರಿಪಡಿಸಬಹುದಾಗಿತ್ತು.

ರಾಜ್ಯಕ್ಕೆ ನೀರಿನ ಹಂಚಿಕೆಯಲ್ಲಿನ ಅನಿಶ್ಚಿತತೆ ಹಾಗೂ ಆಯುಕ್ತರು, ಪ್ರಧಾನ ವ್ಯವಸ್ಥಾಪಕರು, ಪುನರ್ವಸತಿ ಅಧಿಕಾರಿಗಳು, ಇತ್ಯಾದಿ ಎಲ್ಲಾ ಪ್ರಮುಖ ಸ್ಥಾನಗಳಲ್ಲಿ 2007ರಿಂದಲೂ ಮುಂದುವರೆದುಕೊಂಡು ಹೋಗಿದ್ದ ಖಾಲಿ ಹುದ್ದೆಗಳು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಪ್ರಗತಿಗೆ ಅಡಚಣೆಯನ್ನುಂಟು ಮಾಡಿದವು ಎಂಬುದಾಗಿ ಸರ್ಕಾರವು ತಿಳಿಸಿತು (ಡಿಸೆಂಬರ್ 2015).

ಪ್ರಸ್ತುತ, ಸರ್ಕಾರದ ವಿವಿಧ ಮಟ್ಟಗಳಲ್ಲಿ ನಿಯತಕಾಲಿಕ ಸಭೆಗಳನ್ನು ನಡೆಸಲಾಗುತ್ತಿದೆ ಎಂಬುದಾಗಿಯೂ ಉತ್ತರಿಸಿತು. ಪ್ರತ್ಯುತ್ತರವು ಸರ್ಕಾರದಿಂದ ಜನರನ್ನು ಪುನರ್ವಸತಿಗೊಳಿಸುವ ಸೂಕ್ಷ್ಮ ಕೆಲಸಕ್ಕೆ ಹುದ್ದೆಯನ್ನು ತುಂಬದೆ ಮುಂದಾಳುತನದ ಕೊರತೆಯನ್ನು ಎತ್ತಿ ತೋರಿಸುತ್ತದೆ. ಸರ್ಕಾರವು ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯಚಟುವಟಿಕೆಗಳನ್ನು ಜರೂರಾಗಿ ಮಾಡಲು ಸಭೆಗಳನ್ನು ಗಂಭೀರವಾಗಿ ನಡೆಸಬೇಕು.

**ಮಾನವ ಶಕ್ತಿಯ ಕೊರತೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಅನುಷ್ಠಾನವನ್ನು ತೊಂದರೆಗೀಡುಮಾಡಿತು.**

**2.2.20**. ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರ ಕಚೇರಿಯಲ್ಲಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಇಂಜಿನಿಯರ್‌ರವರ ಕಚೇರಿಯಲ್ಲಿ ಸಿಬ್ಬಂದಿಯ ಕೊರತೆಯಿತ್ತು. ಈ ಕಚೇರಿಗಳು ಮಾರ್ಚ್ 2015ರಲ್ಲಿದ್ದಂತೆ ಅನುಕ್ರಮವಾಗಿ ಶೇಕಡಾ 37ರಷ್ಟು ಹಾಗೂ ಶೇಕಡಾ 58ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದವು. ವಿಶೇಷ ಭೂ ಸ್ವಾಧೀನ ಅಧಿಕಾರಿಯವರು, ಪುನರ್ವಸತಿ ಅಧಿಕಾರಿಯವರು, ವಿಶೇಷ ತಹಸಿಲ್ದಾರ್‌ರವರು, ಪ್ರಥಮ ಹಾಗೂ ದ್ವಿತೀಯ ಕಂದಾಯ ಸರ್ವೇಯರುಗಳ ಹುದ್ದೆಗಳನ್ನು ಕಳೆದ ಮೂರರಿಂದ ನಾಲ್ಕು ವರ್ಷಗಳಿಂದ ಭರ್ತಿ ಮಾಡಿರಲಿಲ್ಲ (ಮಾರ್ಚ್ 2015). 2006 ಹಾಗೂ 2013ರ ನಡುವೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಹಾಗೂ ಭೂ ಸ್ವಾಧೀನಗಳ ಆಯುಕ್ತರವರ ನಿಯತಕಾಲಿಕ ಆಯುಕ್ತರವರು ಇರಲಿಲ್ಲ ಹಾಗೂ ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ ಸಂಬಂಧಿಸಿದಂತೆ 2007ರಿಂದಲೂ ನಿಯತಕಾಲಿಕ ಅಧಿಕಾರಿಯವರು ಇರಲಿಲ್ಲ. ಸಿಬ್ಬಂದಿಯ ಕೊರತೆಯು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವಲ್ಲಿ ವಿಪರೀತವಾದ ವಿಳಂಬವಾಗಲು ಕಾರಣಗಳಲ್ಲಿ ಒಂದಾಗಿತ್ತು. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015).

**2.2.21**. ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಕುಂದುಕೊರತೆಗಳನ್ನು ನಿವಾರಿಸುವಂತಹ ಒಂದು ವ್ಯವಸ್ಥೆಯ ಬಗ್ಗೆ ಚಿಂತಿಸಿವೆ. ಪಿಡಿಎಫ್‌ಗಳು ಕ್ಷೇತ್ರ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳನ್ನು ಅಂದರೆ ಪುನರ್ವಸತಿ ಅಧಿಕಾರಿಯವರು, ಪ್ರಧಾನ ವ್ಯವಸ್ಥಾಪಕರು (ಯೋಜನೆ), ಆಯುಕ್ತರು, ಇವರುಗಳನ್ನು ಕುಂದುಕೊರತೆ ನಿವಾರಿಸಲು ಸಂಪರ್ಕಿಸಬಹುದಾಗಿತ್ತು. ಕ್ಷೇತ್ರ ಮಟ್ಟದಲ್ಲಿ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಅವರುಗಳು ತೃಪ್ತಿ ಹೊಂದದಿದ್ದಲ್ಲಿ ಸರ್ಕಾರವನ್ನು ಅಥವಾ ಸಂಬಂಧಿತ ಮಂತ್ರಿಯವರನ್ನು ಸಂಪರ್ಕಿಸಬಹುದಾಗಿತ್ತು.

**ಕುಂದುಕೊರತೆ ನಿವಾರಣಾ ವ್ಯವಸ್ಥೆಯು ಅಸಮರ್ಪಕವಾಗಿತ್ತು.**

ಕ್ರಿಯಾ ಯೋಜನೆಯ ಪ್ರಕಾರ ಅಗತ್ಯವಿದ್ದಂತೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಆಯುಕ್ತರವರು ವಿವಿಧ ಜಲಾಶಯ ಮಟ್ಟಗಳಿಗೆ ತಯಾರಿಸಿದ್ದಂತಹ ಕುಂದುಕೊರತೆಗಳನ್ನು ನಿವಾರಿಸುವ ಪ್ರಕ್ರಿಯೆಯನ್ನು ತೋರಿಸುವಂತಹ ಯಾವುದೇ ದಾಖಲೆಗಳೂ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪಿಡಿಎಫ್‌ಗಳು ಮಾಡಿದ್ದ ಮನವಿಗಳು ತೆಗೆದುಕೊಳ್ಳಲಾಗಿದ್ದ ಅನುಸರಣಾ ಕ್ರಮಗಳು ಅನುಪಸ್ಥಿತವಾಗಿದ್ದವು. ನಾರಾಯಣಪುರ ಜಲಾಶಯದ ಪ್ರವಾಹದ ನೀರಿನಿಂದ ತೊಂದರೆಗೆ ಒಳಗಾಗಿರುವ ಜನತೆಯು ಪರಿಹಾರಗಳನ್ನು ಕಾಣದೇ ಇನ್ನೂ ಷೆಡ್ಡುಗಳಲ್ಲಿ ವಾಸ ಮಾಡುತ್ತಿರುವ ವಾಸ್ತವಾಂಶದಿಂದ ಕಾಣಬಹುದಾದಂತೆ ಪರಿಹಾರಕ ವ್ಯವಸ್ಥೆಯು ಅತ್ಯಂತ ನಿಕೃಷ್ಟಮಟ್ಟದಲ್ಲಿತ್ತು. ಬಾಗಲಕೋಟೆಯಲ್ಲಿ ಜಲಾಶಯ ಮಟ್ಟ 521 ಮೀಟರುಗಳು ಹಾಗೂ 523 ಮೀಟರುಗಳ ನಡುವೆ ಅನಾರೋಗ್ಯಕರ ಪರಿಸ್ಥಿತಿಗಳಿಂದ ಬಳಲುತ್ತಿದ್ದು ತೊಂದರೆಗೆ ಸಿಲುಕಿರುವ ಜನತೆಗೆ 2002ರಿಂದಲೂ ದೂರುಗಳು ಹಾಗೂ ಪ್ರತಿಭಟನೆಗಳ ಹೊರತಾಗಿಯೂ ಪುನರ್ವಸತಿಯನ್ನು ಒದಗಿಸಿಲ್ಲ.

ಜಿಲ್ಲಾ ಉಸ್ತುವಾರಿ ಮಂತ್ರಿಯವರ ನೇತೃತ್ವದಲ್ಲಿ ಆ ಉದ್ದೇಶಕ್ಕಾಗಿ ರಚಿಸಲಾಗಿರುವ ಕುಂದುಕೊರತೆಗಳ ನಿವಾರಣಾ ಸಮಿತಿಯು 2013ರಿಂದಲೂ ವರ್ಷ ಒಂದಕ್ಕೆ ಎರಡು ಸಲ ಸಭೆ ಸೇರಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2015). ಯೋಜನಾ ಪುನರ್ವಸತಿ ಅಧಿಕಾರಿಯವರ ನೇತೃತ್ವದಲ್ಲಿನ ಅಧಿಕೃತ ಸಮಿತಿಯೂ ಸಹ ಪಿಡಿಎಫ್‌ಗಳ ಕುಂದುಕೊರತೆಗಳನ್ನು ಆಲಿಸುವುದಕ್ಕಾಗಿ ಸ್ಥಳೀಯ ಮಟ್ಟದಲ್ಲಿ ನಿಯತವಾಗಿ ಸಭೆ ಸೇರುತ್ತಿದೆ. ಕುಂದುಕೊರತೆಗಳ ಬಾಕಿ ಇರುವ ಪ್ರಕರಣಗಳನ್ನು ಅನುಸರಿಸುವುದಕ್ಕಾಗಿ ಆಯುಕ್ತರವರು, ಪ್ರಧಾನ ವ್ಯವಸ್ಥಾಪಕರು, ವಿಶೇಷ ಜಿಲ್ಲಾಧಿಕಾರಿಯವರು, ಇದೀಗ ನಿಯತವಾಗಿ ಮಾಸಿಕ ಸಭೆಗಳನ್ನು ನಡೆಸುತ್ತಿದ್ದಾರೆ.

ಪ್ರತ್ಯುತ್ತರವು ಇತ್ತೀಚಿನ ಬೆಳವಣಿಗೆಯಾಗಿದೆ. ನಾರಾಯಣಪುರ ಜಲಾಶಯದ ಪ್ರವಾಹದಿಂದ ತೊಂದರೆಗೊಳಗಾದ ಜನತೆಯು ಇನ್ನೂ ಶೆಡ್‌ಗಳಲ್ಲಿ ವಾಸಿಸುತ್ತಿರುವ ವಾಸ್ತವವು, ಯಾವುದೇ ಗಂಭೀರವಾದ ಪರಿಶ್ರಮವನ್ನು ಈ ಕಡೆಗೆ ಹರಿಸಿಲ್ಲ ಎಂಬುದನ್ನು ಸೂಚಿಸುತ್ತದೆ. ಸರ್ಕಾರವು

ಕುಂದುಕೊರತೆ ಸಮಿತಿ ಸಭೆಯು ಪಿಡಿಎಫ್‌ಗಳ ತೊಂದರೆಗಳನ್ನು ನಿವಾರಿಸಲು ತೆಗೆದುಕೊಂಡ ನಿರ್ಧಾರಗಳನ್ನು ಮೇಲ್ವಿಚಾರಣೆ ಮಾಡಬೇಕು.

**ಶಿಫಾರಸ್ಸು ಸಂಖ್ಯೆ.4: ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಇರುವ ತೊಂದರೆಗಳನ್ನು ಚರ್ಚಿಸಲು ಹಾಗೂ ನಿವಾರಣೆಯ ಮೇಲ್ವಿಚಾರಣೆ ಉದ್ದೇಶದಿಂದ ನೇಮಿಸಿರುವ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಬೇಕು. ಕಂಪನಿಯೂ ಸಹ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಪ್ರಗತಿಯನ್ನು ನಿರ್ದೇಶಕರ ಮಂಡಳಿ ಸಭೆಯಲ್ಲಿ ಚರ್ಚಿಸಬೇಕು ಹಾಗೂ ಸಮಯೋಚಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು.**

**ಶಿಫಾರಸ್ಸು ಸಂಖ್ಯೆ.5: ಸಮಯೋಚಿತವಾಗಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಸಾಕಷ್ಟು ಮಾನವಶಕ್ತಿಯನ್ನು ಯೋಜನಾ ಕಛೇರಿಗಳಿಗೆ ಒದಗಿಸಬೇಕು.**

## ನಿರ್ಣಯಗಳು

**ಲೆಕ್ಕಪರಿಶೋಧನೆಯು ಈ ಕೆಳಗಿನ ತೀರ್ಮಾನಗಳಿಗೆ ಬಂದಿದೆ:**

- **ಸರ್ಕಾರವು, ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿ, 2007ರ ಮಾದರಿಯಲ್ಲಿಯೇ ರಾಜ್ಯಕ್ಕಾಗಿ ಒಂದು ನಿರ್ದಿಷ್ಟವಾದ ಹಾಗೂ ಸಮಗ್ರವಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿಯನ್ನು ರೂಪಿಸಿರಲಿಲ್ಲ.**

- **ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿ, 2007ರ ಅನುಸಾರ, ಸರ್ಕಾರವು ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ನಡೆಸಲಿಲ್ಲವಾದ್ದರಿಂದ, ಯೋಜನೆಯಿಂದ ದುರ್ಬಲಗೊಂಡ ಕುಟುಂಬಗಳ, ಯೋಜನೆಯನ್ನು ಕಾರ್ಯಗತಗೊಳಿಸುವ ಪೂರ್ವಾವಧಿಯಲ್ಲಿ ಇದ್ದಂತಹ ಅವರ ಆರ್ಥಿಕ ಸ್ಥಿತಿಯ ಸಮಕ್ಕೆ ಮರಳಿ ತಂದಿರುವುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಇದು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸಿತು.**

- **ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವಲ್ಲಿ ಸರ್ಕಾರದ ಒಟ್ಟಾರೆ ನಿರಾಸಕ್ತಿಯ ಕಾರಣ ಬಾಗಲಕೋಟೆ ಪಟ್ಟಣದಲ್ಲಿನ ಯೋಜನೆಯಿಂದ ಸ್ಥಳಾಂತರಗೊಂಡ 6,329 ಕುಟುಂಬಗಳು ಹಾಗೂ 14 ಗ್ರಾಮಗಳಲ್ಲಿನ 4,274 ಕುಟುಂಬಗಳಿಗೆ ಅನುಕ್ರಮವಾಗಿ 2002 ಹಾಗೂ 2007ರಿಂದ ಪುನರ್ವಸತಿಯನ್ನು ಇನ್ನೂ ಕಲ್ಪಿಸಬೇಕಾಗಿದೆ.**

- **ಒಂದು ಸೂಕ್ತ ಸಮಯದ ಒಳಗೆ ತೊಂದರೆಗೆ ಈಡಾದ ಜನತೆಗೆ ಪುನರ್ವಸತಿ ಕಲ್ಪಿಸುವಲ್ಲಿನ ಸರ್ಕಾರದ ವಿಫಲತೆಯು ಯೋಜನೆಯಿಂದ ಸ್ಥಳಾಂತರಗೊಂಡ ಅನೇಕ ಕುಟುಂಬಗಳಿಗೆ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಅಡಿಯಲ್ಲಿ ಅರ್ಹವಿರುವ ಪ್ರಯೋಜನಗಳನ್ನು ನಿರಾಕರಿಸುವಂತಾಯಿತು ಹಾಗೂ ಕಳೆದ ಹತ್ತು ವರ್ಷಗಳ ಕಾಲ ಅವರುಗಳು ತಾತ್ಕಾಲಿಕ ಶೆಡ್ಡುಗಳಲ್ಲಿ ವಾಸಿಸುವಂತೆ ಮಾಡಿತು.**

- **ಮೇಲ್ವಿಚಾರಣಾ ವ್ಯವಸ್ಥೆಯು ಪರಿಣಾಮಕಾರಿಯಾಗಿರಲಿಲ್ಲ ಮತ್ತು ಮಾನವಶಕ್ತಿಯ ಕೊರತೆಯು ಅನುಷ್ಠಾನವನ್ನು ತೊಂದರೆಗೀಡುಮಾಡಿತು.**